

ದೀಪಂಕರ

ಎಸ್. ಕೆ. ರಾಮಚಂದ್ರ ರಾವ್

ಪ್ರಕಟಣೆಯ ಕ್ರಮಾಂಕ - ೨೬೧

ದೀಪಂಕರ

ಲೇಖಕ

ಎಸ್. ಕೆ. ರಾಮಚಂದ್ರ ರಾವ್

ಪ್ರಧಾನ ಸಂಪಾದಕ

ಎಲ್. ಎಸ್. ಶೇಷಗಿರಿ ರಾವ್

ಭಾರತ ಭಾರತಿ ಪುಸ್ತಕ ಸಂಪದ ಬೆಂಗಳೂರು - ೧೯

ಪ್ರಕಾಶನ
ಭಾರತ - ಭಾರತಿ ಪುಸ್ತಕ ಸಂಪದ

ಸಂಚಾಲನೆ ಮತ್ತು ವಿತರಣೆ
ರಾಷ್ಟ್ರೋತ್ಥಾನ ಸಾಹಿತ್ಯ
ಕೆಂಪೇಗೌಡ ನಗರ ಬೆಂಗಳೂರು ೧೯

ಪ್ರಕಟಣೆ
ಜನವರಿ ೧೯೭೬

ಬೆಲೆ
೯೦ ಪೈಸೆ

ಕಲೆ
ಕೆ. ಎಂ. ಚಂದ್ರಮೂರ್ತಿ

ಮುದ್ರಣ
ರಾಷ್ಟ್ರೋತ್ಥಾನ, ಬೆಂಗಳೂರು ೧೯

DEEPANKARA (Kannada) – a life-sketch for children written by S. K. Ramachandra Rao. Publishers: BHARATA-BHARATI PUSTAKA SAMPADA. Sole Distributors: RASHTROTTHANA SAHITYA, Bangalore-19. Pages: 48. Price: 90 Paise only. Published in January 1976.

ಓಂ

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ।
ವರ್ಷಂ ತತ್ ಭಾರತಂ ನಾಮ ಭಾರತೀ ಯತ್ರ ಸಂತತಿಃ ॥

ಬನ್ನಿ, ಅನುಸರಿಸೋಣ !

ಕನ್ನಡ ಮಕ್ಕಳ ಅಕ್ಕರೆಯ ಪುಸ್ತಕರಾಶಿಯಾಗಿ ಇಗೋ ಇಲ್ಲಿದೆ ಭಾರತ - ಭಾರತಿ ಪುಸ್ತಕ ಸಂಪದ. ಗತಕಾಲದಿಂದ ಆಧುನಿಕಕಾಲದವರೆಗೆ ಸಾವಿರಾರು ವರ್ಷಗಳಿಂದ ಭಾರತದ ಜೀವನದಲ್ಲಿ ಬೆಳಗಿದ ಮಹಾ ಚೇತನಗಳ ಪರಿಚಯ ಇಲ್ಲಿದೆ.

ಕಳೆದ ಮೂರು ವರ್ಷಗಳಲ್ಲಿ ೨೪೦ ಪುಸ್ತಕಗಳನ್ನು ಎಳೆಯರ ಕೈಯಲ್ಲಿರಿಸಿದ್ದೇವೆ. ನಮ್ಮ ಹಿರಿಯ - ಕಿರಿಯ ಬರಹಗಾರರು, ಕಲಾವಿದರು ತುಂಬ ಸಹಕಾರ ನೀಡಿದ್ದಾರೆ. ಅವರಿಗೆ ನಾವು ಕೃತಜ್ಞರು.

ಮಕ್ಕಳ ಮತ್ತು ಪೋಷಕರ ಹೃತ್ಪೂರ್ವಕ ಸಹಕಾರ ಈ ಪುಸ್ತಕ ಮಾಲೆಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಅಡ್ಡಿ ಆತಂಕಗಳಿಗೇನೂ ಕಡಿಮೆ ಇಲ್ಲ. ಆದರೆ ಕನ್ನಡ ಕುಲ ಕೋಟಿಯ ಮೆಚ್ಚಿಕೆ, ಪ್ರೋತ್ಸಾಹ ಧೈರ್ಯವಾಗಿ ನಮ್ಮನ್ನು ಮುನ್ನಡೆಸಿದೆ. ಹೃದಯ ತುಂಬಿ ಬರುವ ಕೃತಜ್ಞತೆಯಿಂದ ಈ ಉಪಕಾರವನ್ನು ಸ್ಮರಿಸುತ್ತೇವೆ.

ಈ ನಾಲ್ಕನೇ ವರ್ಷದಲ್ಲೂ ೬೦ ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡುತ್ತಿದ್ದೇವೆ. ಕನ್ನಡಿಗರ ಔದಾರ್ಯದ ಸ್ಫೂರ್ತಿ ನಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸುವುದೆಂಬ ನಂಬುಗೆ ನಮ್ಮದು.

ಈ ನಮ್ಮ ಕರ್ತವ್ಯದಲ್ಲಿ ತಾಯಿ ಭಾರತಿ ನಮ್ಮಲ್ಲಿ ಹೆಚ್ಚಿನ ಪ್ರೇರಣೆಯನ್ನು, ಸಂಕಲ್ಪಶಕ್ತಿಯನ್ನು ಎಚ್ಚರಿಸಲಿ. ಭಾರತದ ಮಕ್ಕಳು ವಿಶ್ವದ ಮಹಾಮಾನವರಾಗಿ ಸಾರ್ಥಕ ಬದುಕನ್ನು ಬಾಳಲಿ.

ಭಾರತ ಪರಂಪರೆಯ ಅಖಂಡ ಪುಣ್ಯದರ್ಶನ ಇದೋ ಇಲ್ಲಿದೆ. ಬನ್ನಿ, ಅದನ್ನು ಅರಿಯೋಣ, ಅನುಸರಿಸೋಣ, ಸುಸ್ವಾಗತ.

ವಂದೇ ಮಾತರಂ !

ಶ್ರೀ ರಾಕ್ಷಸ
ನವೆಂಬರ್ ೫, ೧೯೭೫

ಎಲ್. ಎಸ್. ಶೇಷಗಿರಿ ರಾವ್
ಪ್ರಧಾನ ಸಂಪಾದಕ

ದೀಪಂಕರ

ಹನ್ನೊಂದನೆಯ ಶತಮಾನದ ಭಾರತದ ಅಸಾಧಾರಣ ವಿದ್ವಾಂಸ - ಸಂತ. ಹಂಬಲಿಸಿ ಹಂಬಲಿಸಿ ವರ್ಷ ಗಟ್ಟಲೆ ಕಾದು ಟಿಬೆಟ್‌ನ ರಾಜನೂ ಜನರೂ ಅವನನ್ನು ಬರಮಾಡಿ ಕೊಂಡರು. ಅವನ ವಿದ್ವತ್ತೂ ನಿರ್ಮಲ ಜೀವನವೂ ಟಿಬೆಟ್‌ಗೆ ಹೊಸ ಬೆಳಕನ್ನು ನೀಡಿದವು.

ದೀಪಂಕರ

ಅರವತ್ತು ವರ್ಷದ ಮುದುಕ; ಉಟ್ಟ ಬಟ್ಟೆ ಕಾವಿ ಬಣ್ಣದ್ದು, ತಲೆಯ ಮೇಲೆ ಪಂಡಿತರು ತೊಡು ವಂಥ ಕುಲಾವಿ; ಹೊಳೆಯುವ ಕಣ್ಣುಗಳು, ಬೆಳಗುವ ಮುಖ; ದಿಟ್ಟ ನಡಿಗೆ; ನಯವಾದ ಮಾತು, ನಗು ನಗುತ್ತ ಎಲ್ಲರನ್ನೂ ಬರಮಾಡಿಕೊಳ್ಳುವ ರೀತಿ. ಬಂಗಾಳದ ಕಡೆಯ ಈ ಹಿರಿಯ ಸಂನ್ಯಾಸಿಯ ಹಿಂದೆ ಟಿಬೆಟ್ ದೇಶದ ಶಿಷ್ಯರು, ಉಳಿದ ಎಂಟು ಮಂದಿ ಶಿಷ್ಯರು ಭಾರತದವರೇ. ಮಗಧ ರಾಜ್ಯವನ್ನು ಬಿಟ್ಟು ಈ ಸಾಹಸಿಗಳ ತಂಡ ನೇಪಾಳಕ್ಕೆ ಹೋಗಿ ಅಲ್ಲಿಂದ ಮುಂದೆ ಹಿಮಾಲಯ ಬೆಟ್ಟಸಾಲುಗಳನ್ನು ಕಾಲುನಡಿಗೆ ಯಲ್ಲೇ ದಾಟಿ ಟಿಬೆಟ್ ದೇಶವನ್ನು ಮುಟ್ಟಿತು. ದೂರದ ದೇಶ, ಬೇರೆ ಬುಡಕಟ್ಟಿನ ಜನರು; ಅವರ ಮಾತು ನೆಟ್ಟಗೆ ಬಾರದು; ಅವರ ಆಚಾರ-ವ್ಯವಹಾರ ಗಳು ತಿಳಿಯದು; ಕಾಡು-ಮೇಡುಗಳಲ್ಲಿ, ಬೆಟ್ಟದ ತುತ್ತ

ತುದಿಗಳಲ್ಲಿ ಬೇಟೆಯಾಡುತ್ತಾ ಅಲೆದಾಡುವ ಮಂದಿ ಅವರು. ಕ್ರೂರಿಗಳಾದ ಬರ್ಬರ ಜನರೆಂಬ ಪ್ರತೀತಿ ಬೇರೆ! ಇಂಥ ಪರಿಸ್ಥಿತಿಯಲ್ಲಿ ಕೆಲವು ಮಂದಿ ಶಿಷ್ಯ ರೊಂದಿಗೆ ಯಾವ ಶಸ್ತ್ರಾಸ್ತ್ರವನ್ನೂ ಹಿಡಿಯದೆ ಯಾವ ವೀರನಾಯಕನ ರಕ್ಷಣೆಯೂ ಇಲ್ಲದೆ ಆ ದೇಶಕ್ಕೆ ತನ್ನ ಇಳಿವಯಸ್ಸಿನಲ್ಲಿ ತೆರಳಿದ ಮುದುಕ ಸಾಹಸಿಯಲ್ಲವೆ?

ವಿದ್ವಾಂಸ-ಸಂತ

ಆಪರೆ ಈ ಮುದುಕ ಆ ದೇಶದೊಳಗೆ ಕಾಲಿಟ್ಟೊಡನೆ ಅಲ್ಲಿನ ಜನರೆಲ್ಲ ಸಂತೋಷದಿಂದ ಅವನನ್ನು ಬರಮಾಡಿಕೊಂಡರು; ದೇಶದ ರಾಜ ತಾನೇ ಗಡಿಗೆ ಬಂದು ಈ ಮುದುಕನ ಕಾಲುಗಳಿಗೆರಗಿ ಆದರ ದಿಂದ ದೇಶದೊಳಗೆ ಕರೆದೊಯ್ದ. ಈ ದೇಶಕ್ಕೆ ಬರುವ ದಾರಿಯಲ್ಲೇ ಅಷ್ಟಿಷ್ಟು ಆ ದೇಶಭಾಷೆಯನ್ನು ಕಲಿತಿದ್ದ ಈ ಭಾರತೀಯ ಸಂನ್ಯಾಸಿ ಆ ದೇಶಭಾಷೆ ಯಲ್ಲೇ ಧರ್ಮವನ್ನು ಜನರಿಗೆ ತಿಳಿಯಹೇಳತೊಡಗಿದ ಮೇಲಂತೂ ಆ ಜನ ಇವನನ್ನು ದೇವತೆಯೆಂದೇ ಗೌರವಿಸತೊಡಗಿದರು! 'ಅತೀಶ', 'ಮಹಾಪ್ರಭು'

ಎಂದು ಕರೆದರು. ಮುಂದೆ ಹದಿಮೂರು ವರ್ಷಗಳ ಕಾಲ ಅವನನ್ನು ಅಲ್ಲಿಯೇ ಉಳಿಸಿಕೊಂಡರು. ಅವನು ಅಲ್ಲಿಯೇ ನೆಲೆಸಿ ಅಲ್ಲಿಯೇ ತೀರಿಕೊಂಡ.

ಈ ಮುದುಕನ ಹೆಸರು ದೀಪಂಕರ-ಶ್ರೀಜ್ಞಾನ. ಅವನು ಸೇರಿದ ದೇಶ ಹಿಮಾಲಯ ಪ್ರಾಂತದ ಟಿಬೆಟ್. ಅವನು ಭಾರತದೇಶವನ್ನು ಬಿಟ್ಟು ಹೊರಟಿದ್ದು ಕ್ರಿಸ್ತಶಕ ೧೦೪೦ ರ ಸುಮಾರಿಗೆ. ಅವನು ಟಿಬೆಟ್‌ನಲ್ಲಿ ತೀರಿಕೊಂಡುದು ೧೦೫೪ ರಲ್ಲಿ, ಎಪ್ಪತ್ತನಾಲ್ಕು ವರ್ಷಗಳ ವೃದ್ಧಾಪ್ಯದಲ್ಲಿ. ಅವನು ಬೌದ್ಧಧರ್ಮದ ಮಹಾಯಾನ ಪಂಥಕ್ಕೆ ಸೇರಿದ ಸಂನ್ಯಾಸಿ. ನಾಡಿನಲ್ಲೆಲ್ಲ ಅವನಷ್ಟು ವಿದ್ವಾಂಸನಾಗಲೀ ಪ್ರತಿಭಾಶಾಲಿಯಾಗಲೀ ಇನ್ನೊಬ್ಬ ಇರಲಾರನೆಂದು ಜನರೆಲ್ಲ ತಿಳಿದಿದ್ದರು. ಎಷ್ಟು ದೊಡ್ಡ ಪಂಡಿತನೋ ಅಷ್ಟೇ ದೊಡ್ಡ ಸಂತ. ಆದುದರಿಂದಲೇ ಟಿಬೆಟ್ ದೇಶದ ದೊರೆ ಇವನನ್ನು ಹೇಗಾದರೂ ಮಾಡಿ ತನ್ನ ದೇಶಕ್ಕೆ ಕರೆಸಿಕೊಳ್ಳಬೇಕೆಂದು ಹವಣಿಸಿದುದು.

ನಮ್ಮ ನಾಡಿನ ಉತ್ತರ ಮೇರೆ ಹಿಮಾಲಯ ಬೆಟ್ಟ ಸಾಲು. ಅಲ್ಲಿರುವ ರಾಜ್ಯಗಳಲ್ಲಿ ಟಿಬೆಟ್ ಮುಖ್ಯವಾದುದು. ಅದಕ್ಕೆ ತನ್ನದೇ ಆದ, ಹಿಂದಿನಿಂದ ಬಂದ

ಇತಿಹಾಸವಿದೆ, ಬೇರೂರಿ ಬಂದ ಸಂಸ್ಕೃತಿಯಿದೆ. ಈ ಇತಿಹಾಸದ ಮೇಲೂ ಸಂಸ್ಕೃತಿಯ ಮೇಲೂ ಭಾರತ ದೇಶದ ಪ್ರಭಾವ ಹೆಚ್ಚಿಗೆ ಬಿದ್ದಿದೆ. ಹೀಗೆ ಭಾರತೀಯ ಪ್ರಭಾವವನ್ನು ಟಿಬೆಟ್‌ನಲ್ಲಿ ಹರಡಿದ, ಬೇರೂರಿಸಿದ ನೂರಾರು ಭಾರತೀಯ ಪಂಡಿತರಲ್ಲಿ ನಾಳಂದಾ, ವಿಕ್ರಮ ಶೀಲ ವಿದ್ಯಾಲಯಗಳಿಗೆ ಸೇರಿದವರೇ ಹೆಚ್ಚು ಮಂದಿ. ಅವರಲ್ಲಿ ದೀಪಂಕರ–ಶ್ರೀಜ್ಞಾನ ಪ್ರಮುಖನಾದವನು. ಮೂರು ವಿಶ್ವವಿದ್ಯಾನಿಲಯಗಳಲ್ಲಿ ಆಚಾರ್ಯನಾಗಿದ್ದು, ಎರಡು ವಿಶ್ವವಿದ್ಯಾನಿಲಯಗಳ ಅಧ್ಯಕ್ಷನಾಗಿದ್ದ ಇವನು ಸಂಸ್ಕೃತದಲ್ಲಿ ಶಾಸ್ತ್ರಗ್ರಂಥಗಳನ್ನು ಬರೆದ. ಆ ಗ್ರಂಥ ಗಳನ್ನೆಲ್ಲ ಟಿಬೆಟ್‌ನ ಜನರು ತಮ್ಮ ಭಾಷೆಗೆ ಭಾಷಾಂತರ ಮಾಡಿಕೊಂಡು ತಮ್ಮ ಪವಿತ್ರ ವಾಙ್ಮಯದಲ್ಲಿ ಸೇರಿಸಿ ಗೌರವಿಸಿದ್ದಾರೆ; ಅವುಗಳ ಅಧ್ಯಯನ ಅಲ್ಲಿನ ಮಠಗಳಲ್ಲಿ ಶ್ರದ್ಧೆಯಿಂದ ನಡೆಯುತ್ತಿದ್ದಿತು. ಇಂದಿಗೂ ಆ ದೇಶದ ಜನರು ಇವನನ್ನು ತುಂಬ ಭಕ್ತಿಯಿಂದ ಕಾಣುತ್ತಾರೆ.

ಎಳೆತನದ ಬೆಳೆ

ದೀಪಂಕರ ಬಂಗಾಳದ ಪೂರ್ವ ಭಾಗಕ್ಕೆ ಸೇರಿದ

ವಿಕ್ರಮಪುರ ಎಂಬಲ್ಲಿ ಕ್ರಿಸ್ತಶಕ ೯೮೨ ರಲ್ಲಿ ಹುಟ್ಟಿದ. ತಂದೆಯ ಹೆಸರು ಕಲ್ಯಾಣಶ್ರೀ; ಅವನು ಸಣ್ಣ ರಾಜ್ಯವೊಂದರ ದೊರೆ. ತಾಯಿ ಪ್ರಭಾವತಿ. ಅವರ ಮೂವರು ಮಕ್ಕಳಲ್ಲಿ ಇವನು ಎರಡನೆಯವನು. ದೀಪಂಕರ ಎಂಬುದು ಅವನು ಸಂನ್ಯಾಸಿಯಾದಮೇಲೆ ಪ್ರಸಿದ್ಧವಾದ ಹೆಸರು; ತಂದೆ-ತಾಯಿಯರು ಇಟ್ಟಿದ್ದ ಹೆಸರು ಚಂದ್ರಗರ್ಭ ಎಂದು.

ತಂದೆ-ತಾಯಿಯರು ಬೌದ್ಧಧರ್ಮಕ್ಕೆ ಒಲಿದಿದ್ದವರು; ಧರ್ಮದಲ್ಲಿ ತುಂಬ ಆದರವನ್ನು ಇರಿಸಿಕೊಂಡಿದ್ದವರು. ಬುದ್ಧಿಶಾಲಿಯೆಂದು ಹೆಸರಾದ ಚಂದ್ರಗರ್ಭನನ್ನು ಆಚಾರ್ಯ ಜೇತಾರಿಯೆಂಬ ಪ್ರಸಿದ್ಧ ಪಂಡಿತನ ಬಳಿ ವಿದ್ಯಾಭ್ಯಾಸಕ್ಕೆಂದು ಕಳುಹಿಸಿದರು. ಜೇತಾರಿ ಊರಾಚೆ ಗುಡಿಸಿಲೊಂದರಲ್ಲಿ ವಾಸಿಸುತ್ತಿದ್ದ. ಚಂದ್ರಗರ್ಭ ಅವನನ್ನು ಭೇಟಿಯಾಗಿ ತಾನು ವಿದ್ಯಾಭ್ಯಾಸಕ್ಕೆ ಬಂದೆನೆಂದು ಹೇಳಲು ಜೇತಾರಿ, "ನೀನು ಯಾರು?" ಎಂದು ಕೇಳಿದ.

ಚಂದ್ರಗರ್ಭ ಇನ್ನೂ ಹುಡುಗ, "ನಾನು ಊರ ದೊರೆಯ ಮಗ" ಎಂದ.

ಅದಕ್ಕೆ ಜೇತಾರಿ, "ನಮಗೆ ದೊರೆಯೂ ಇಲ್ಲ, ಸೇವಕನೂ ಇಲ್ಲ; ಹೊರಡು!" ಎಂದುಬಿಟ್ಟ.

ಆಗ ಚಂದ್ರಗರ್ಭ ವಿನೀತನಾಗಿ, "ನಾನು ಸಂನ್ಯಾಸಿಯಾಗಲು ತಮ್ಮ ಬಳಿ ಬಂದಿದ್ದೇನೆ, ಕೃಪೆಮಾಡಿ ಧರ್ಮಬೋಧೆ ಮಾಡಬೇಕು" ಎಂದು ಬೇಡಿಕೊಂಡ.

ಜೇತಾರಿ ಅವನನ್ನು ಕುರಿತು, "ಒಳ್ಳೆಯದು, ಹಾಗಾದರೆ ನಾಳಂದಾ ವಿಹಾರಕ್ಕೆ ಹೋಗು" ಎಂದು ಅಲ್ಲಿಗೆ ಕಳುಹಿಸಿದ. ಅದೇ ಊರಿನಲ್ಲಿರದೆ ತಂದೆಯ ಮನೆಯಿಂದ ದೂರವಿದ್ದರೆ ಅವನ ಜಂಬ ಅಡಗುವುದು ಸುಲಭವೆಂದು ಜೇತಾರಿ ಈ ಸೂಚನೆಯನ್ನು ಮಾಡಿದ.

ಚಂದ್ರಗರ್ಭ ನಾಳಂದಾ ವಿಶ್ವವಿದ್ಯಾನಿಲಯಕ್ಕೆ ಹೊರಟ. ಇಡೀ ನಾಡಿನಲ್ಲಿ ಉತ್ತಮ ವಿದ್ಯಾಕೇಂದ್ರವೆಂದು ನಾಳಂದಾ ಹೆಸರಾಗಿದ್ದಿತು. ಅಲ್ಲಿ ಅವನು ಹಲವರು ಪಂಡಿತರ ಬಳಿ ಓದಿದ. ಅಲ್ಲದೆ ವಿಕ್ರಮಶೀಲ ವಿಹಾರದ ಪ್ರಸಿದ್ಧ ಗುರುಗಳ ಬಳಿಯೂ ಕಲಿತ. ಓದು ಮುಗಿದನಂತರ ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಸಂಸಾರವನ್ನು ಬಿಟ್ಟು ಬೌದ್ಧಸಂನ್ಯಾಸಿಯಾಗಿಬಿಟ್ಟ. ಸಂನ್ಯಾಸಿಯಾಗಿ ಚಂದ್ರಗರ್ಭ 'ದೀಪಂಕರ-ಶ್ರೀಜ್ಞಾನ' ಎಂಬ ಹೆಸರನ್ನು ತಳೆದ.

ಆ ಕಾಲಕ್ಕೆ ಬೌದ್ಧಧರ್ಮದಲ್ಲಿ ತಾಂತ್ರಿಕ ಪ್ರಭಾವ

'ನಾನು ಸಂನ್ಯಾಸಿಯಾಗಲು ಬಂದಿದ್ದೇನೆ, ಕೃಪೆ ಮಾಡಬೇಕು.'

ಪ್ರಬಲವಾಗಿದ್ದಿತು. ತಾಂತ್ರಿಕ ಸಂಪ್ರದಾಯದ ದೀಕ್ಷೆಯನ್ನೂ ದೀಪಂಕರ ಪಡೆಯಲೆಂದು ಕೃಷ್ಣಗಿರಿಯೆಂಬ ಬೆಟ್ಟದಲ್ಲಿರುತ್ತಿದ್ದ ರಾಹುಲ ಗುಹ್ಯವಜ್ರನ ಬಳಿ ಹೋಗಿ 'ಅಭಿಷೇಕ'ವನ್ನು ಪಡೆದ. ಈ ದೀಕ್ಷೆಯನ್ನು ಪಡೆಯುವಾಗ 'ಗುಹ್ಯಜ್ಞಾನವಜ್ರ' ಎಂಬ ಹೆಸರನ್ನೂ ಗುರು ಅವನಿಗೆ ನೀಡಿದ. ಮಂತ್ರಸಿದ್ಧಿಯನ್ನು ಪಡೆದ ದೀಪಂಕರ ತಾರಾದೇವಿಯನ್ನು ಸಾಕ್ಷಾತ್ಕರಿಸಿಕೊಂಡ. ಚಿಕ್ಕಂದಿನಿಂದಲೂ ತಾರಾದೇವಿ ಅವನ ಇಷ್ಟದೇವತೆ. ತಾಂತ್ರಿಕ ವಿದ್ಯೆಗೆ ಆ ಕಾಲದಲ್ಲಿ ಹೆಸರಾಗಿದ್ದ ಉಡ್ಡೀಯಾನವೆಂಬ ದೇಶದಲ್ಲಿ ಇವನು ಮೂರು ವರ್ಷಗಳನ್ನು ಕಳೆದು ಹಲವಾರು ಸಿದ್ಧಿಗಳನ್ನು ವಶಪಡಿಸಿಕೊಂಡ.

ಆದರೆ ಅನನಿಗೆ ತಂತ್ರಮಂತ್ರಗಳಲ್ಲಿ ಅಷ್ಟಾಗಿ ಆಸಕ್ತಿಯಿರದೆ ಬುದ್ಧ ಬೋಧಿಸಿದ ವಿನಯದ ಬಗ್ಗೆ ಅಭಿಮಾನ ಬೆಳೆಯಿತು. ಬಿಹಾರದಲ್ಲಿರುವ ಬುದ್ಧಗಯೆಗೆ ಬಂದು ಅಲ್ಲಿದ್ದ ವಜ್ರಾಸನ ಮಹಾವಿಹಾರದ ಅಧಿಪತಿಯಾಗಿದ್ದ ಮಹಾವಿನಯಧರ ಶೀಲರಕ್ಷಿತನ ಬಳಿ ಶಿಷ್ಯನಾಗಿ ನಿಂತು ಎರಡು ವರ್ಷ ಕಾಲ ವಿನಯಪಿಟಕವನ್ನು ಓದಿದ. ಮೂವತ್ತೊಂದು ವರ್ಷ ವಯಸ್ಸಾಗುವ ವೇಳೆಗೆ

ಮೂರೂ ತ್ರಿಪಿಟಕಗಳನ್ನು (ಎಂದರೆ ಇಡೀ ಬೌದ್ಧ ವಾಙ್ಮಯವನ್ನು) ಆಳವಾಗಿ ತಿಳಿದುಕೊಂಡಿದ್ದ.

ಮುಂದೆ ಸುವರ್ಣದ್ವೀಪ(ಸುಮಾತ್ರಾ, ಮಲಯ)ಕ್ಕೆ ಹೋಗಿ ಅಲ್ಲಿ ಪ್ರಸಿದ್ಧ ಆಚಾರ್ಯನಾಗಿದ್ದ ಧರ್ಮ ಕೀರ್ತಿಯ ಬಳಿ ಶಿಷ್ಯನಾಗಿದ್ದುಕೊಂಡು 'ಬೋಧಿಚಿತ್ತ' ವನ್ನು ಬೆಳೆಸಿಕೊಳ್ಳುವ ವಿಧಾನವನ್ನು ಅರಿತುಕೊಂಡು ಭಾರತಕ್ಕೆ ಹಿಂದಿರುಗಿದ. ಸುವರ್ಣದ್ವೀಪದಲ್ಲಿ ಅವನು ಒಟ್ಟು ಇದ್ದ ಸಮಯ ಹನ್ನೆರಡು ವರ್ಷಗಳು. ಭಾರತಕ್ಕೆ ಹಿಂದಿರುಗಿದುದು ಕ್ರಿಸ್ತಶಕ ೧೦೨೫ ರಲ್ಲಿ. ಅಷ್ಟರ ವೇಳೆ ಗಾಗಲೇ ಅವನಿಗೆ ಅಧ್ಯಯನ ಧ್ಯಾನ, ಮಂಡಲ ಪೂಜೆ ಗಳ ಫಲವಾಗಿ ಸಂಬೋಧಿ ಒದಗಿದ್ದಿತು. (ಸಂಬೋಧಿ ಯೆಂದರೆ ಚೆನ್ನಾಗಿ ಅರಿಯುವುದು; ಇರುವುದನ್ನು ಇದ್ದಂತೆಯೇ ನೇರವಾಗಿ ತಿಳಿದುಕೊಳ್ಳುವುದು. ಹೀಗೆ ಅರಿತವನೇ ಜೀವನ್ಮುಕ್ತ, ಸಂಬುದ್ಧ. ಜಗತ್ತಿನ ನಾಟಕ ಅವನನ್ನು ಮರುಳು ಮಾಡಲಾರದು; ಸಾಮಾನ್ಯ ಮನುಷ್ಯರ ನೆಲೆಯನ್ನು ಮೀರಿ ಅವನು ಬದುಕ ತೊಡಗುತ್ತಾನೆ.) ಅವನ ಯಶಸ್ಸು ದೇಶದ ಎಲ್ಲೆಡೆಯೂ ಹರಡಿತು.

ಮಹಾ ಪಂಡಿತ

ಆ ಕಾಲಕ್ಕೆ ಗೌಡ ದೇಶವನ್ನು (ಎಂದರೆ ಈಗಿನ ಬಂಗಾಳ, ಬಿಹಾರ ಪ್ರಾಂತಗಳು) ಪಾಲ ವಂಶದ ಅರಸರು ಆಳುತ್ತಿದ್ದರು. ಈ ವಂಶದ ಮಹೀಪಾಲನೆಂಬ ರಾಜನು ರಾಜ್ಯಭಾರವನ್ನು ಮಾಡುತ್ತಿದ್ದಾಗಲೇ ದೀಪಂಕರ-ಶ್ರೀಜ್ಞಾನ ಸುವರ್ಣ ದ್ವೀಪದಿಂದ ಭಾರತಕ್ಕೆ ಹಿಂದಿರುಗಿದುದು. ಅವನ ಕೀರ್ತಿಯನ್ನು ಕೇಳಿದ್ದ ಈ ರಾಜ ದೀಪಂಕರನನ್ನು ಆದರದಿಂದ ಬರಮಾಡಿಕೊಂಡ. ರಾಜನು ದೀಪಂಕರನನ್ನು ವಿಕ್ರಮಶೀಲ ಮಹಾವಿದ್ಯಾಲಯದ ಅಧ್ಯಕ್ಷನಾಗಿರಬೇಕೆಂದು ಬೇಡಿಕೊಳ್ಳಲು ದೀಪಂಕರ ಒಪ್ಪಿಕೊಂಡ. ಆಗ ಅವನಿಗೆ ನಲವತ್ತಮೂರು ವರ್ಷಗಳಷ್ಟೆ.

ವಿಕ್ರಮಶೀಲ ಮಹಾವಿಹಾರ ಈಗಿನ ಭಾಗಲಪುರದ ಬಳಿಯಿರುವ ಸುಲ್ತಾನಗಂಜ್ ಎಂಬಲ್ಲಿದ್ದಿತು; ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಭಿಕ್ಷುಗಳಿದ್ದರು; ೧೫೦ ಮಂದಿ ಉಪಾಧ್ಯಾಯರು ಅಲ್ಲಿ ಪಾಠ ಹೇಳುತ್ತಿದ್ದರು. ಗಂಗಾನದಿಯ ದಂಡೆಯ ಮೇಲಿದ್ದ ಈ ವಿದ್ಯಾಪೀಠವನ್ನು ಬಂಗಾಳದ ದೊರೆ ಧರ್ಮಪಾಲದೇವನೇ ಸ್ಥಾಪಿಸಿದನು; ೧೨೦೫ ರ ವರೆಗೂ ಇದು ಇಡೀ ದೇಶದಲ್ಲೆಲ್ಲ

ಪ್ರಸಿದ್ಧವಾದ ವಿದ್ಯಾಕೇಂದ್ರವಾಗಿದ್ದಿತು. ಅಲ್ಲಿಗೆ ವಿದ್ಯಾರ್ಥಿಗಳು ಸೇರಬೇಕಾದರೆ ಪಂಡಿತರು ನಡೆಸುತ್ತಿದ್ದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅವರನ್ನು ಸಮಾಧಾನ ಪಡಿಸಬೇಕಾಗಿದ್ದಿತು. ವಿಹಾರದ ನಾಲ್ಕೂ ದಿಕ್ಕು ಗಳಲ್ಲಿ ನಾಲ್ಕು ಬಾಗಿಲುಗಳಿದ್ದು ಆಯಾ ದಿಕ್ಕು ಗಳಿಂದ ಬಂದ ವಿದ್ಯಾರ್ಥಿಗಳನ್ನು ಪರೀಕ್ಷೆ ಮಾಡಲು ಪಂಡಿತರಿರುತ್ತಿದ್ದರು. ಇವರಿಗೆ ದ್ವಾರಪಂಡಿತರೆಂದು ಹೆಸರು. ಪೂರ್ವದ ಬಾಗಿಲಲ್ಲಿ ರತ್ನಾಕರ ಶಾಂತಿ, ಪಶ್ಚಿಮದಲ್ಲಿ ಪ್ರಜ್ಞಾಕರಮತಿ, ಉತ್ತರದಲ್ಲಿ ನಾಡ ಪಂಡಿತ, ದಕ್ಷಿಣದಲ್ಲಿ ವಾಗೀಶ್ವರ ಕೀರ್ತಿ ಇವರು ದ್ವಾರಪಂಡಿತರಾಗಿದ್ದರು. ಇವರೆಲ್ಲ ಮಹಾಪಂಡಿತರು, ಪ್ರಖ್ಯಾತರು. ಇವರ ಯುಗವಾದನಂತರ ವಿದ್ಯಾ ಲಯದ ಆಡಳಿತವನ್ನು ನೋಡಿಕೊಳ್ಳಲು ನೇಮಕ ಗೊಂಡವನು ದೀಪಂಕರ. ಇವನನ್ನು 'ಉಪಾಧ್ಯಾಯ' ಎಂದು ಕರೆಯುತ್ತಿದ್ದರು; ಎಂದರೆ ಅಧ್ಯಕ್ಷ, ಕುಲಪತಿ. ಈ ವಿದ್ಯಾಲಯವನ್ನು ನೋಡಿಕೊಳ್ಳುತ್ತಿದ್ದಾಗಲೇ ಓದಂತಪುರಿ ಮಹಾವಿದ್ಯಾಲಯದ ಆಡಳಿತವನ್ನೂ ನೋಡಿಕೊಳ್ಳುತ್ತಿದ್ದ.

ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದ ಕಾಲದಲ್ಲಿಯೇ ದೀಪಂಕರ ಹಲವಾರು ಪುಸ್ತಕಗಳನ್ನೂ ಬರೆದ. 'ಆರ್ಯಗಣಪತಿ ಸಾಧನ', 'ಹಯಗ್ರೀವ ಸಾಧನ', 'ಮಹಾಸೂತ್ರಸಮುಚ್ಚಯ', 'ಹೋಮವಿಧಿ' ಮೊದಲಾದವು ಅವನ ಕೃತಿಗಳು. ಅವನ ಹೆಸರಿನಲ್ಲಿ ಒಟ್ಟು ಮೂವತ್ತೆಂಟು ಪುಸ್ತಕಗಳಿವೆ. ಇವೆಲ್ಲ ಅವನ ಯಶಸ್ಸನ್ನು ನಾಡಿನಲ್ಲೆಲ್ಲ ಹರಡಿದವು. ನಾಡಿನಾಚೆಯೂ ಅವನ ಹೆಸರು ಮನೆಮಾತಾಯಿತು.

ಟಿಬೆಟ್‌ನ ಕರೆ

ಹೀಗೆ ಅವನ ಹೆಸರನ್ನು ಕೇಳಿ ಅವನನ್ನು ಬರಮಾಡಿಕೊಳ್ಳಬೇಕೆಂದು ಬಯಸಿದವರಲ್ಲಿ ಟಿಬೆಟ್ ದೇಶದ ದೊರೆ ದೇವಗುರು-ಜ್ಞಾನಪ್ರಭನೆಂಬವನೊಬ್ಬ; ಟಿಬೆಟಿ ಭಾಷೆಯಲ್ಲಿ ಅವನ ಹೆಸರು ಲ್ಹ-ಬ್ಲಮ ಯೆ-ಶೆಸ್-ಓದ್. ಅವನೂ ಅವನ ಮೂವರು ಸೋದರಳಿಯಂದಿರೂ ಸ್ವತಃ ಪಂಡಿತರು, ಬೌದ್ಧಧರ್ಮದಲ್ಲಿ ಶ್ರದ್ಧೆಯುಳ್ಳವರು. ಆ ವೇಳೆಗಾಗಲೇ ಟಿಬೆಟ್ ದೇಶಕ್ಕೆ ಬೌದ್ಧಧರ್ಮ ಬಂದಿದ್ದಿತು. ಕ್ರಿಸ್ತಶಕ ೭೪೭ ರಲ್ಲಿ ನಾಳಂದಾ ವಿಹಾರದ

ಪಂಡಿತರಾದ ಶಾಂತರಕ್ಷಿತ ಮತ್ತು ಪದ್ಮಸಂಭವ ಟಿಬೆಟ್‌ಗೆ ಬಂದು ಅಲ್ಲಿ ಬೌದ್ಧಧರ್ಮವನ್ನು ಹರಡಲೆತ್ನಿಸಿದ್ದರು. ದೀಪಂಕರನಿಗೆ ಸುಮಾರು ಇನ್ನೂರು ವರ್ಷಗಳ ಮೊದಲಿನ ಮಾತು ಇದು. ಆದರೆ ಅವರ ಕಾಲದನಂತರ ಬೌದ್ಧಧರ್ಮ ಅಷ್ಟು ಚೆನ್ನಾಗಿ ಬೆಳೆಯಲಾಗಲಿಲ್ಲ; ಅದು ಉಳಿಯುವುದೂ ಕಷ್ಟವೆಂದು ತೋರಿತು. ಆ ಸಮಯದಲ್ಲಿ ದೊರೆ ಜ್ಞಾನಪ್ರಭ ಭಾರತದೇಶದಿಂದ ಸಮರ್ಥನಾದ ಪಂಡಿತನೊಬ್ಬನನ್ನು ಟಿಬೆಟ್‌ಗೆ ಕರೆಸಿಕೊಂಡರೆ ಒಳ್ಳೆಯದೆಂದೂ ಬೌದ್ಧಧರ್ಮ ಬೇರೂರಲು ನೆರವಾದೀತೆಂದೂ ಬಗೆದು ಎಲ್ಲರನ್ನೂ ವಿಚಾರಿಸುತ್ತಿದ್ದ. ಅವನು ಯಾರಲ್ಲಿ ಈ ವಿಚಾರವನ್ನು ಪ್ರಸ್ತಾಪಮಾಡಿದರೂ ದೀಪಂಕರನ ಹೆಸರೇ ಕೇಳಿಬರುತ್ತಿದ್ದಿತು. ದೀಪಂಕರ ಟಿಬೆಟ್‌ಗೆ ಬರುವುದಾದರೆ ತುಂಬ ಒಳ್ಳೆಯದೆಂದೂ ಟಿಬೆಟ್‌ನ ಭಾಗ್ಯೋದಯವಾದೀತೆಂದೂ ಎಲ್ಲರೂ ಬಗೆದಿದ್ದರು. ಆದರೆ ಇಷ್ಟು ದೊಡ್ಡ ಪಂಡಿತನನ್ನು ಬರಮಾಡಿಕೊಳ್ಳುವುದು ಹೇಗೆ? ವಿಕ್ರಮಶೀಲ ವಿದ್ಯಾಪೀಠದ ಕುಲಪತಿ ಸ್ಥಾನವನ್ನು ಬಿಟ್ಟು ಅವನು ಬರಲೊಪ್ಪುವನೆ? ವಿದ್ಯಾರ್ಥಿಗಳೂ

ಅರಸನೂ ಅವನನ್ನು ಕಳುಹಿಸಲೊಪ್ಪುವರೆ? ದೇಶದ ಜನರು ಇಂಥ ಮೇಧಾವಿಯನ್ನು ಬಿಟ್ಟುಕೊಡುವರೆ? ತಾನೇ ಪರದೇಶಕ್ಕೆ ಬರಲು ಒಪ್ಪಿಯಾನೆ?

ಇಷ್ಟೆಲ್ಲ ಅಡ್ಡಿ - ಆತಂಕಗಳಿದ್ದರೂ ದೊರೆ ಆಸ್ಥಾನ ಪಂಡಿತನಾಗಿದ್ದ ವೀರ್ಯಸಿಂಹನೆಂಬ ಟಿಬೆಟ್‌ನ ಜಾಣ ತರುಣನನ್ನು ವಿಕ್ರಮಶೀಲವಿಹಾರಕ್ಕೆ ಕಳುಹಿಸಿ, ದೀಪಂಕರನ ಅಭಿಪ್ರಾಯವನ್ನು ಅರಿತುಕೊಳ್ಳಲೆತ್ನಿಸಿದ. ವೀರ್ಯಸಿಂಹನು ಟಿಬೆಟ್‌ನ ಹಲವಾರು ವಿದ್ವಾಂಸರೊಡಗೂಡಿ, ಅಪಾರ ಬಂಗಾರವನ್ನೂ ತೆಗೆದುಕೊಂಡು ಕಷ್ಟಪಟ್ಟು ಪ್ರವಾಸಮಾಡಿ ಕಡೆಗೆ ವಿಕ್ರಮಶೀಲ ವಿಹಾರಕ್ಕೆ ಬಂದ. ದೀಪಂಕರನನ್ನು ಭೇಟಿಮಾಡಿ, ತಾನು ತಂದಿದ್ದ ಬಂಗಾರವನ್ನು ಅವನಿಗೊಪ್ಪಿಸಿ ಟಿಬೆಟ್ ದೇಶದ ದೊರೆಯ ಆಸೆಯನ್ನು ಅರಿಕೆ ಮಾಡಿಕೊಂಡ. ದೀಪಂಕರ ಒಪ್ಪಲಿಲ್ಲ. "ಟಿಬೆಟ್‌ಗೆ ಹೋಗಲು ಎರಡು ಕಾರಣಗಳು - ಒಂದು ಬಂಗಾರ, ಅದರಾಶೆ ನನಗಿಲ್ಲ; ಇನ್ನೊಂದು ಕರುಣೆ - ಅದು ನನಗೆ ಸಾಲದು!" ಹೀಗೆಂದು ಬಂಗಾರವನ್ನು ವೀರ್ಯಸಿಂಹನಿಗೆ ಹಿಂದಿರುಗಿಸಿಬಿಟ್ಟ. ವೀರ್ಯಸಿಂಹ ನಿರಾಶನಾಗಿ

ಅಳಲು ಮೊದಲಿಟ್ಟ. ದೀಪಂಕರನ ನಿಶ್ಚಯವೇನೂ ಬದಲಾಗಲಿಲ್ಲ. ವೀರ್ಯಸಿಂಹ ಬಂಗಾರದೊಡನೆ ಟಿಬೆಟ್‌ದೇಶಕ್ಕೆ ಹಿಂದಿರುಗಿ ದೊರೆಗೆ ತನ್ನ ನಿಷ್ಫಲ ಪ್ರಯತ್ನದ ವಿವರಗಳನ್ನು ತಿಳಿಸಿದ. ತಾನು ದೀಪಂಕರ ನನ್ನು ಕಂಡಂದಿನಿಂದ ಅವನ ಬಳಿ ಶಿಷ್ಯವೃತ್ತಿ ಮಾಡ ಬೇಕೆಂಬ ಹಂಬಲ ಹೆಚ್ಚಾಗಿದ್ದುದರಿಂದ ವೀರ್ಯಸಿಂಹ ಭಾರತದೇಶಕ್ಕೆ ಮತ್ತೆ ಬಂದು ವಿಕ್ರಮಶೀಲವಿಹಾರ ದಲ್ಲಿ ವಿದ್ಯಾರ್ಥಿಯಾಗಿ ನಿಂತ.

'ಆಗಲಿ, ಬರುತ್ತೇನೆ'

ವೀರ್ಯಸಿಂಹನಿಂದ ದೀಪಂಕರನ ವಿಚಾರವನ್ನು ಕೇಳಿ ತಿಳಿದುಕೊಂಡ ದೊರೆಗೆ ಹೇಗಾದರೂ ದೀಪಂಕರ ನನ್ನು ತನ್ನ ದೇಶಕ್ಕೆ ಕರೆಸಿಕೊಳ್ಳಲೇಬೇಕೆಂಬ ಹಂಬಲ ಮೂಡಿತು. ಇನ್ನೂ ಹೆಚ್ಚು ಬಂಗಾರವನ್ನು ದೀಪಂಕರನಿಗೆ ಕಳುಹಿಸಿ ನೋಡುವ ಸನ್ನಾಹ ಮಾಡಿದ.

ಅಷ್ಟರಲ್ಲಿ ನೆರೆನಾಡಿನ ಗರ್-ಲೋಗ್ ಸೈನ್ಯ ಈ ರಾಜ್ಯದ ಮೇಲೆ ಆಕ್ರಮಣ ನಡೆಸಿ ರಾಜನನ್ನು ಕೈಸೆರೆ ಹಿಡಿಯಿತು. ಸೆರೆಯಿಂದ ರಾಜನನ್ನು ಬಿಡಬೇಕೆಂದರೆ

ರಾಜ ಬೌದ್ಧಧರ್ಮವನ್ನು ಬಿಡಬೇಕು, ಇಲ್ಲವೇ ರಾಜ್ಯದ ಜನರು ರಾಜನ ಮೈತೂಕದಷ್ಟು ಬಂಗಾರವನ್ನು ಒಪ್ಪಿಸ ಬೇಕು ಎಂಬ ಷರತ್ತನ್ನು ಈ ಸೈನ್ಯದ ನಾಯಕರು ಮುಂದಿಟ್ಟರು. ರಾಜ ಬೌದ್ಧಧರ್ಮವನ್ನು ಕೈಬಿಡುವ ಸಂಭವವೇ ಇರಲಿಲ್ಲವಾಗಿ, ಜನರು ಅವನ ತೂಕದಷ್ಟು ಬಂಗಾರವನ್ನು ಸಂಗ್ರಹಿಸತೊಡಗಿದರು. ಅವನ ಮೈ ತೂಕದ ಬಂಗಾರವೆಂದರೆ ಸಾಮಾನ್ಯವೇ? ರಾಜನನ್ನು ಜನರು ಪ್ರೀತಿಸುತ್ತಿದ್ದುದರಿಂದ ಬೇಕಾದಷ್ಟು ಬಂಗಾರ ವೇನೋ ಸಂಗ್ರಹವಾಯಿತು; ಅವನ ತಲೆಯಷ್ಟು ತೂಕ ಮಾತ್ರ ಕಡಿಮೆಯಾಯಿತು. ಇಷ್ಟು ತಾನೆ? ಇನ್ನೇನು ಕೆಲವೇ ದಿನಗಳಲ್ಲಿ ಅಷ್ಟನ್ನೂ ಸೇರಿಸಿ ರಾಜನನ್ನು ಬಂಧನ ದಿಂದ ಬಿಡಿಸಿಕೊಳ್ಳುತ್ತೇವೆ ಎಂದು ಜನರು ಧೈರ್ಯ ತಂದುಕೊಂಡರು. ರಾಜನಿಗೆ ಈ ಸುದ್ದಿ ಮುಟ್ಟಿದಾಗ ರಾಜ, "ಅಯ್ಯೋ, ನನಗಾಗಿ ಇಷ್ಟು ಬಂಗಾರ ಹಾಳು ಮಾಡುವುದು ಬೇಡ. ನಾನು ಹೇಗೂ ಮುದುಕ; ಸೆರೆ ಯಿಂದ ಹೊರಬಂದರೂ ಬಹುಕಾಲ ಬದುಕಲಾರೆ. ಬದುಕಿ ತಾನೇ ನಾನು ಮಾಡುವುದು ಏನು? ಇಷ್ಟು ಬಂಗಾರ ವನ್ನೂ ದೀಪಂಕರನಿಗೆ ಕಳುಹಿಸಿ ಅವನು ಈ ದೇಶಕ್ಕೆ

ಕಾಲಿಡುವಂತೆ ಮಾಡುವುದಾದರೆ ನನಗೂ ಸಂತೋಷ, ದೇಶಕ್ಕೂ ಹಿತ!" ಎಂದು ಜನರಿಗೆ ಹೇಳಿ ಕಳುಹಿಸಿದ. ಸಂದೇಶ ಜನರನ್ನು ಮುಟ್ಟುವುದರೊಳಗೆ ಸತ್ತುಹೋದ!

ರಾಜನ ಇಚ್ಛೆಯಂತೆ ದೀಪಂಕರನನ್ನು ಕರೆಸಿ ಕೊಳ್ಳುವ ಪ್ರಯತ್ನ ಮತ್ತೆ ನಡೆಯಿತು. ಆ ಕಾಲಕ್ಕೆ ಜಯಶೀಲನೆಂಬ ಟಿಬೆಟ್‌ನ ೨೭ ವರ್ಷದ ಪಂಡಿತ ಭಾರತ ದೇಶದಲ್ಲಿಯೇ ಎರಡು ವರ್ಷಕಾಲ ಇದ್ದು ಇಲ್ಲಿನ ದೇಶ ಭಾಷೆಗಳನ್ನು ಕಲಿತಿದ್ದ. ಟಿಬೆಟ್ ರಾಜಾಸ್ಥಾನದಿಂದ ಅವನಿಗೊಂದು ಓಲೆ ಹೋಯಿತು - ವಿಕ್ರಮಶೀಲ ಮಹಾ ವಿಹಾರದ ದೀಪಂಕರನನ್ನು ಭೇಟಿ ಮಾಡಿ ಟಿಬೆಟ್‌ಗೆ ಬರುವಂತೆ ಬೇಡಿಕೊಳ್ಳಬೇಕು ಎಂದು. ಅವನ ನೆರವಿಗೆಂದು ಒಂದುನೂರು ಜನರನ್ನೂ ಅಪಾರ ಬಂಗಾರವನ್ನೂ ಕಳುಹಿಸಲಾಯಿತು.

ಜಯಶೀಲ ಇಷ್ಟೂ ಪರಿವಾರ, ಸಾಮಗ್ರಿಗಳೊಂದಿಗೆ ಬುದ್ಧಗಯೆಗೆ ಬಂದು ಅಲ್ಲಿಂದ ವಿಕ್ರಮಶೀಲ ಮಹಾ ವಿಹಾರಕ್ಕೆ ಬಂದ. ಅಲ್ಲಿ ಟಿಬೆಟ್‌ನ ಇನ್ನೊಬ್ಬ ಪಂಡಿತ ವೀರ್ಯಸಿಂಹ (ಮೊದಲ ಬಾರಿ ದೀಪಂಕರನನ್ನು ಟಿಬೆಟ್‌ಗೆ ಕರೆಕೊಳ್ಳಲೆತ್ನಿಸಿ ಸೋತವನು) ದೀಪಂ

ಕರನ ಬಳಿಯೇ ಶಿಷ್ಯನಾಗಿದ್ದ. ಜಯಶೀಲ, ವೀರ್ಯ ಸಿಂಹ ಇಬ್ಬರೂ ಒಂದು ರಾತ್ರಿ ದೀಪಂಕರ ತನ್ನ ಕೋಣೆಯಲ್ಲಿ ಒಬ್ಬನೇ ಇದ್ದಾಗ ಅವನನ್ನು ಕಂಡು ಲಿಖಿತ ವಿನಂತಿಯೊಂದನ್ನು ಸಲ್ಲಿಸಿದರು. ಟಿಬೆಟ್‌ನಲ್ಲಿ ಬೌದ್ಧ ಧರ್ಮ ಮೊದಲಾದುದು, ಧರ್ಮ ದುಃಸ್ಥಿತಿಗೆ ಇಳಿದುದು, ರಾಜನ ಶ್ರದ್ಧೆ ಬಹಳ ಇದ್ದು ದೀಪಂಕರ ಟಿಬೆಟ್‌ಗೆ ಬರಲೆಂದು ತನ್ನ ಪ್ರಾಣವನ್ನೇ ಅರ್ಪಿಸಲು ಸಿದ್ಧನಾದುದು, ಟಿಬೆಟ್‌ನ ಜನರು ದೀಪಂಕರನ ಬರವನ್ನೇ ಎದುರು ನೋಡುತ್ತಿರುವುದು ಎಲ್ಲವನ್ನೂ ಅದರಲ್ಲಿ ವಿವರಿಸಿದ್ದರು. ಇದನ್ನೆಲ್ಲ ಕೇಳಿ ದೀಪಂಕರನ ಮನಸ್ಸು ಕರಗಿತು. "ನಾನು ಮುದುಕ; ಇಲ್ಲಿನ ಹೊಣೆಯೂ ಕೆಲಸವೂ ತುಂಬ ಇದೆ. ಆದರೆ ನಿಮ್ಮ ಕಾತರವನ್ನು ನೋಡಿದರೆ ಬರಲಾರೆ ಎನ್ನಲಾರೆ. ಬರುತ್ತೇನೆ. ಆದರೆ ನೀವು ತಂದಿರುವ ಬಂಗಾರವೇನೂ ನನಗೆ ಬೇಡ" ಎಂದು ಹೇಳಿ ಬಂಗಾರವನ್ನೆಲ್ಲ ಅವರಿಗೇ ಹಿಂದಿರುಗಿಸಿ, ಟಿಬೆಟ್‌ಗೆ ಹೊರಡಲು ಸಿದ್ಧನಾದ.

ವಿಕ್ರಮಶೀಲದ ಇತರ ಪಂಡಿತರೂ ವಿದ್ಯಾಲಯದ ಅಧಿಕಾರಿಗಳೂ ರಾಜನೂ ದೀಪಂಕರನನ್ನು ಬಿಟ್ಟು

ಕೊಡಲು ಇಷ್ಟಪಡದಿದ್ದುದು ಸಹಜವೇ. ಟಿಬೆಟ್‌ನ ವಿದ್ಯಾರ್ಥಿಗಳು ತುಂಬ ಬೇಡಿಕೊಳ್ಳಲು, ದೀಪಂಕರನೂ ಒಪ್ಪಿಕೊಳ್ಳಲು ಅವರೂ ಒಪ್ಪಬೇಕಾಯಿತು. ಮಹಾ ವಿಹಾರದ ಮೇಲಧಿಕಾರಿ ರತ್ನಾಕರಶಾಂತಿಸ್ಥವಿರನು ಟಿಬೆಟ್‌ನ ವಿದ್ಯಾರ್ಥಿಗಳೊಂದಿಗೆ ದೀಪಂಕರನನ್ನು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಟಿಬೆಟ್‌ನಲ್ಲಿ ಉಳಿಸಿಕೊಳ್ಳಲಾಗದೆಂದೂ ಅವರೇ ಅವನನ್ನು ವಿಕ್ರಮ ಶೀಲವಿಹಾರಕ್ಕೆ ಕರೆತಂದು ಬಿಡಬೇಕೆಂದೂ ಮಾತು ಮಾಡಿಕೊಂಡ. ಆದರೆ ದೀಪಂಕರ ಕೈಗೊಂಡಿದ್ದ ಕೆಲಸ ಗಳು ಅರ್ಧಕ್ಕೆ ಉಳಿದಿದ್ದುದರಿಂದ ದೀಪಂಕರ ಹದಿನೆಂಟು ತಿಂಗಳುಗಳ ಕಾಲ ತನಗೆ ಅವಕಾಶ ಬೇಕೆಂದು ಹೇಳಲು ಟಿಬೆಟ್‌ನ ವಿದ್ಯಾರ್ಥಿಗಳು, "ಸ್ವಾಮಿ, ತಾವು ಬರುವು ದಾದರೆ ವರ್ಷಗಳಾದರೂ ಕಾಯುತ್ತೇವೆ" ಎಂದರು.

ದೀಪಂಕರನು ವಿಕ್ರಮಶೀಲವಿಹಾರವನ್ನು ಬಿಟ್ಟು ಟಿಬೆಟ್‌ಗೆ ಹೊರಟ ವರ್ಷ ೧೦೪೦. ಅವನೊಂದಿಗೆ ಇಪ್ಪತ್ತು ಮಂದಿ ಭಾರತೀಯ ವಿದ್ಯಾರ್ಥಿಗಳೂ ಇಬ್ಬರು ಟಿಬೆಟ್‌ನ ವಿದ್ಯಾರ್ಥಿಗಳೂ ಹೊರಟರು. ಹೀಗೆ ಮಗಧ ದಿಂದ ಹೊರಟ ತಂಡ ನೇಪಾಳದ ಮೂಲಕ ಟಿಬೆಟ್



ಟಿಬೆಟ್‌ನ ರಾಜನೂ ಜನರೂ ಸಂಭ್ರಮದಿಂದ, ಭಕ್ತಿ



ಯಿಂದ ದೀಪಂಕರನನ್ನು ಬರಮಾಡಿಕೊಂಡರು.

ಸೇರುವುದೆಂದು ಗೊತ್ತಾಯಿತು. ಮರುವರ್ಷ ಯಾತ್ರಿಕರು ನೇಪಾಳವನ್ನು ಮುಟ್ಟಿದೊಡನೆ ವೀರ್ಯಸಿಂಹ, ದೀಪಂಕರನ ಅಚ್ಚುಮೆಚ್ಚಿನ ಶಿಷ್ಯ, ತೀರಿಕೊಂಡ. ಸಣ್ಣ ವಯಸ್ಸಿನಲ್ಲೇ ತುಂಬ ಪ್ರಭಾವಶಾಲಿಯಾಗಿದ್ದು ಧರ್ಮವನ್ನು ಆಳವಾಗಿ ಅರಿತಿದ್ದು, ಗುರುವಿಗೆ ಕಾರ್ಯದರ್ಶಿಯಂತಿದ್ದ ವೀರ್ಯಸಿಂಹ ಹಠಾತ್ತನೆ ತೀರಿಕೊಂಡುದು ದೀಪಂಕರನಿಗೆ ಸೈರಿಸಲಾರದ ದುಃಖವಾಯಿತು.

ಅಂತೂ ಮತ್ತೊಂದು ವರ್ಷ ಪ್ರವಾಸಮಾಡಿ ೧೦೪೨ರಲ್ಲಿ ದೀಪಂಕರನ ತಂಡ ಟಿಬೆಟ್ ದೇಶದ ಗಡಿಯನ್ನು ಸೇರಿತು. ಅವನನ್ನು ಸ್ವಾಗತಿಸಲು ರಾಜನೇ ಮೊದಲಾಗಿ ಸಾವಿರಾರು ಪೌರರು ಅಲ್ಲಿ ಕಾದಿದ್ದು ದೀಪಂಕರನನ್ನು ಕಂಡೊಡನೆ ಎಲ್ಲರೂ ಭೂಮಿಯ ಮೇಲೆ ಅಡ್ಡಬಿದ್ದು ನಮಸ್ಕರಿಸಿದರು. ನೆರೆದವರೆಲ್ಲ ಒಕ್ಕೊರಲಿನಿಂದ 'ದೀಪಂಕರ ಸ್ತುತಿ'ಯನ್ನು ಟಿಬೆಟ ಭಾಷೆಯಲ್ಲಿ ಪಠಿಸಿದರು. ಅನಂತರ ರಾಜನು ಮುಂದೆ ಬಂದು, ದೀಪಂಕರ ಗುರುವಿನ ಆಗಮನದಿಂದ ಬಹುಕಾಲದ ಕನಸು ನನಸಾಯಿತೆಂದೂ ಅವನಿಂದ ಟಿಬೆಟ್‌ದೇಶದಲ್ಲಿ ಶಾಸ್ತ್ರ ಮತ್ತು ನೀತಿ ಇವು ಬೇರೂರುವುದೆಂಬ ಭರವಸೆ ತನಗುಂಟೆಂದೂ ಹೇಳಿ ತುಂಬ

ಭಕ್ತಿಯಿಂದ ದೀಪಂಕರನನ್ನು ಸ್ವಾಗತಿಸಿದನು. ದೀಪಂಕರನು ಜನರ ಭಕ್ತಿ ಭಾವವನ್ನು ಮೆಚ್ಚಿಕೊಂಡು ಅಲ್ಲಿಯೇ ಮೊದಲ ಪ್ರವಚನವನ್ನು ನಡೆಸಿದನು.

ಟಿಬೆಟ್‌ನಲ್ಲಿ ಕೆಲಸ

ಜನರು ಇಷ್ಟು ಆದರದಿಂದ ತನ್ನನ್ನು ಬರಮಾಡಿಕೊಂಡಿರುವುದು ತನ್ನ ಮೇಲೆ ಹೆಚ್ಚಿನ ಹೊಣೆಯನ್ನು ಹೊರಿಸಿದೆಯೆಂಬ ಅರಿವು ದೀಪಂಕರನಿಗಿದ್ದಿತು. ಟಿಬೆಟ್‌ಗೆ ಹೋಗುವುದೆಂದು ಖಂಡಿತವಾದಂದಿನಿಂದ ಆ ದೇಶದ ಭಾಷೆಯನ್ನು ಕಲಿಯತೊಡಗಿದ್ದ; ಟಿಬೆಟ್‌ನಲ್ಲಿ ಅವನ ಕೆಲಸ ಹೀಗಾಗಿ ಹಗುರವಾಯಿತು. ಬರಬರುತ್ತ ಆ ಭಾಷೆಯ ಮೇಲೆ ಒಡೆತನ ಕೈಗೂಡಿತು. ಹಲವಾರು ಶಾಸ್ತ್ರ ಗ್ರಂಥಗಳನ್ನು ಸಂಸ್ಕೃತದಿಂದ ಟಿಬೆಟ ಭಾಷೆಗೆ ಅನುವಾದ ಮಾಡುವುದು ದೀಪಂಕರನಿಗೆ ಸಾಧ್ಯವಾಯಿತು. ತನ್ನ ಪ್ರವಾಸ ಕಾಲದಲ್ಲಿ ಟಿಬೆಟ ಭಾಷೆಯಲ್ಲಿಯೇ ಪ್ರವಚನಗಳನ್ನು ಕೂಡ ಕೊಡುತ್ತಿದ್ದ. ಜನರೊಂದಿಗೆ ಬೆರೆತು, ಅವರ ಸ್ವಭಾವವನ್ನು ಅರಿತುಕೊಂಡು, ಅವರಿಗೆ ಸಹಾಯಕ

ವಾಗುವಂತೆ ಧರ್ಮಬೋಧೆ ಮಾಡುತ್ತಿದ್ದುದರಿಂದ ಜನರಿಗೆಲ್ಲ ತುಂಬ ಪ್ರಿಯನಾದ.

ಮೂರು ವರ್ಷಗಳ ಮಟ್ಟಿಗೆಂದು ಟಿಬೆಟ್‌ಗೆ ಬಂದ ದೀಪಂಕರ ಜನರಲ್ಲಿ ಧರ್ಮ ರೂಢಮೂಲ ವಾಗಲು ತನ್ನ ನೆರವು ಬೇಕಾದೀತೆಂದು ಅರಿತು ಅಲ್ಲಿಯೇ ಇರಲು ಮನಸ್ಸು ಮಾಡಿದ. ದೀಪಂಕರ ಆ ದೇಶದಲ್ಲಿ ಒಟ್ಟು ಹದಿಮೂರು ವರ್ಷಗಳನ್ನು ಕಳೆದ. ಭಾರತಕ್ಕೆ ಮರಳಲೇ ಇಲ್ಲ; ಅಲ್ಲಿಯೇ ತೀರಿಕೊಂಡ.

ಅವನ ಟಿಬೆಟ್ ಪ್ರವಾಸ ಕಾಲದಲ್ಲಿ ಹಲವಾರು ಸ್ವಾರಸ್ಯದ ಪ್ರಸಂಗಗಳು ಜರುಗಿದವು. ಟಿಬೆಟ್‌ಗೆ ಬಂದ ಹೊಸದರಲ್ಲಿ ಅಲ್ಲಿನ ಮಹಾಪಂಡಿತನೊಬ್ಬ, ರತ್ನಭದ್ರ ಎಂಬವನು, 'ಈ ದೀಪಂಕರನೇನು ನನಗಿಂತ ಮೇಧಾವಿಯೆ? ನೋಡಿದರೆ ಹಾಗೇನೂ ಕಾಣುವುದಿಲ್ಲ! ಆದರೂ ರಾಜ ಇವನನ್ನು ಕರೆಸಿ ಕೊಂಡಿದ್ದಾನೆ. ನಾನೂ ಇವನಿಗೆ ಗೌರವವನ್ನು ತೋರಿಸುವ ನಾಟಕ ನಡೆಯಬೇಕು' ಎಂದುಕೊಂಡು ದೀಪಂಕರನನ್ನು ಸಂದರ್ಶಿಸಿ, ಆಗ ತಾನೆ ಥೊ-ಲಿಂಗ್ ವಿಹಾರ ದೇವಾಲಯಕ್ಕೆ ಹೊರಟಿದ್ದ ದೀಪಂಕರ

ನೊಂದಿಗೆ ತಾನೂ ಹೊರಟ. ಆ ದೇವಾಲಯದ ಗೋಡೆಗಳ ಮೇಲೆ ತಾಂತ್ರಿಕ ದೇವತೆಗಳ ಚಿತ್ರಗಳನ್ನು ಮನೋಹರವಾಗಿ ಬಿಡಿಸಿದ್ದರು. ದೀಪಂಕರ ಅವನ್ನೆಲ್ಲ ನೋಡುತ್ತ ಒಂದೊಂದು ದೇವತೆಯನ್ನು ಕಂಡಾಗಲೂ ಒಂದೊಂದು ಸ್ತೋತ್ರವನ್ನು ಹೇಳುತ್ತಿದ್ದ. ಇದನ್ನು ಕೇಳಿ ಅಚ್ಚರಿಗೊಂಡ ರತ್ನಭದ್ರ, "ಸ್ವಾಮಿ, ಈ ಸ್ತೋತ್ರಗಳು ಯಾವ ಪುಸ್ತಕದಲ್ಲಿವೆ?" ಎಂದು ಕೇಳಿದ. ಅದಕ್ಕೆ ದೀಪಂಕರ ನಸುನಗುತ್ತ, "ಇವು ಯಾವ ಪುಸ್ತಕ ದಲ್ಲಿಯೂ ಇಲ್ಲ. ದೇವತೆಗಳ ಅನುಗ್ರಹದಿಂದ, ಸಮಯಸ್ಫೂರ್ತಿಯಿಂದ ನಾನೇ ರಚಿಸಿದವು" ಎಂದ. ತಾನೇ ಪಂಡಿತನೆಂದು ಜಂಬಪಡುತ್ತಿದ್ದ ರತ್ನಭದ್ರ ಈಗ ವಿನಯಶಾಲಿಯಾದ.

'ಬಂಗಾರವನ್ನು ಮಾರಿ ಇದ್ದಿಲು ಕೊಳ್ಳಬೇಡಿ'

ದೇವಾಲಯವನ್ನು ನೋಡಿಯಾದ ಮೇಲೆ ದೀಪಂಕ ರನೂ ರತ್ನಭದ್ರನೂ ಅಂಗಳದಲ್ಲಿ ಕುಳಿತು ಮಾತುಕತೆ ಯಾಡಿದರು; ನೂರಾರು ಮಂದಿ ಭಕ್ತಿಯಿಂದ ಸುತ್ತ

ನಿಂತಿದ್ದರು. ದೀಪಂಕರನು ರತ್ನಭದ್ರನನ್ನು ಕುರಿತು, "ತಮ್ಮ ವಿಶೇಷವಾದ ಅಧ್ಯಯನ ಯಾವ ಶಾಸ್ತ್ರದಲ್ಲಿ?" ಎಂದು ಕೇಳಿದ. ರತ್ನಭದ್ರ ತನ್ನ ಪಾಂಡಿತ್ಯದ ಭಾಗಗಳನ್ನೆಲ್ಲ ಪಟ್ಟಿಮಾಡಿ, ತಾನು ಎಲ್ಲ ಶಾಸ್ತ್ರಗಳಲ್ಲಿಯೂ ಸಿದ್ಧಹಸ್ತನೆಂದು ಹೇಳಿಕೊಂಡ. ಅದನ್ನು ಕೇಳಿ ದೀಪಂಕರ ಕೈಜೋಡಿಸಿ, "ತಾವು ಇಷ್ಟು ದೊಡ್ಡ ಪಂಡಿತರು ಇಲ್ಲಿರುವಾಗ ರಾಜ ನನ್ನನ್ನು ಕರೆಸಿಕೊಂಡ ಅಗತ್ಯವೇನಿದ್ದಿತು?" ಎಂದು ಮೆಚ್ಚಿಗೆಯನ್ನು ಸೂಚಿಸಿದ. ಅನಂತರ ಧ್ಯಾನಮಾರ್ಗದ ವಿಚಾರವಾಗಿ ಒಂದು ಕ್ಲಿಷ್ಟ ಪ್ರಶ್ನೆಯನ್ನೆತ್ತಿ ಅದರ ಬಗ್ಗೆ ರತ್ನಭದ್ರನ ಅಭಿಪ್ರಾಯವೇನೆಂದು ದೀಪಂಕರ ಪ್ರಶ್ನಿಸಿದ. ರತ್ನಭದ್ರ, "ಅದಕ್ಕೆ ಸೂತ್ರಗಳಿಂದ ಒಂದು ಸಮಾಧಾನ, ತಂತ್ರಗಳಿಂದ ಇನ್ನೊಂದು ಸಮಾಧಾನ ಹೀಗೆ ಬೇರೆಬೇರೆ ಹೇಳಬೇಕಾಗುತ್ತದೆ" ಎಂದ. ಆಗ ದೀಪಂಕರ ನಗುತ್ತಾ, "ಈಗ ನನಗೆ ಅರ್ಥವಾಯಿತು. ರಾಜ ನನ್ನನ್ನು ಇಲ್ಲಿಗೆ ಕರೆಸಿಕೊಂಡಿರುವುದು ಏಕೆ ಎಂಬುದು" ಎಂದ. ಎಂದರೆ, ಸೂತ್ರಗಳಲ್ಲಿಯೇ (ಶಾಸ್ತ್ರಗ್ರಂಥಗಳಲ್ಲಿಯೇ) ಒಂದು ಅರ್ಥವಿದೆ, ತಂತ್ರಗಳಲ್ಲಿ (ಅನುಭವದಲ್ಲಿ) ಬೇರೊಂದು

ಅರ್ಥವಿದೆ ಎನ್ನುವುದು ಸರಿಯಾದ ನಿಲುವಲ್ಲ. ಶಾಸ್ತ್ರ ಇರುವುದು ಅನುಭವಕ್ಕಾಗಿಯೇ. ಎರಡರ ನಡುವೆ ವಿರೋಧವಿದೆಯೆಂದು ಇಲ್ಲಿನ ಜನರು ಬಗೆದಿದ್ದಾರೆ; ವಿರೋಧವೇನೂ ಇರದೆಂದು ತೋರಿಸಲೆಂದೇ ರಾಜ ತನ್ನನ್ನು ಅಲ್ಲಿಗೆ ಕರೆಕೊಂಡಿರುವುದು ಎಂದು ದೀಪಂಕರನಿಗನಿಸಿತು. ನೆರೆದವರೆಲ್ಲ ನಕ್ಕರು. ರತ್ನ ಭದ್ರನ ಗರ್ವ ಚೂರುಚೂರಾಯಿತು.

ರತ್ನಭದ್ರ ತನ್ನ ಸಂಪತ್ತನ್ನೆಲ್ಲ ದೀಪಂಕರನ ಮುಂದಿಟ್ಟು, "ಇದನ್ನು ಗುರುದಕ್ಷಿಣೆಯನ್ನಾಗಿ ಸ್ವೀಕರಿಸಿ ನನಗೆ ಉಪದೇಶ ಮಾಡಿ" ಎಂದು ಕೇಳಿಕೊಂಡ. ದೀಪಂಕರನು, "ಇವೆಲ್ಲ ನನಗೆ ಬೇಡ, ನಾನು ಹೋದೆಡೆ ಯಲ್ಲೆಲ್ಲ ನನ್ನ ಬಳಿಯಿದ್ದು ದುಭಾಷಿಯಾಗಿ ನನಗೆ ನೆರವಾದರೆ ಸಾಕು, ಅದೇ ಗುರುದಕ್ಷಿಣೆ" ಎಂದ. ರತ್ನಭದ್ರ, "ಸ್ವಾಮಿ, ನನಗೆ ಮುಪ್ಪು ಅಡರಿತು, ದೇಹ ದುರ್ಬಲವಾಗುತ್ತ ಬಂದಿದೆ. ಇನ್ನು ನನಗೆ ಲೌಕಿಕ ವ್ಯವಹಾರ ಬೇಡ ಎನಿಸುತ್ತದೆ. ಪಾಂಡಿತ್ಯದ ಹೊರೆಯನ್ನು ಹೊತ್ತದ್ದಾಯಿತು; ಕೊಂಚ ಧ್ಯಾನ ಮಾಡಿ ಬದುಕನ್ನು ಕೊನೆಗಾಣಿಸುವ ಬಯಕೆಯಿದೆ.

ಧ್ಯಾನಮಾರ್ಗದಲ್ಲಿ ನನಗೆ ಉಪದೇಶ ಮಾಡುವ ಕೃಪೆ ಮಾಡಿ. ತಮ್ಮಿಂದ ಕೆಲವು ಸಿದ್ಧಿಗಳನ್ನಾದರೂ ಕಲಿಯುವೆನು" ಎಂದ. (ಸಿದ್ಧಿಯೆಂದರೆ ದೂರದಲ್ಲಿ ಮಾತನಾಡಿದುದನ್ನು ಕೇಳಿಸಿಕೊಳ್ಳುವುದು, ಸಾಮಾನ್ಯವಾಗಿ ಜನರು ನೋಡಲಾರದುದನ್ನು ತಾನು ನೋಡುವುದು, ಗಾಳಿಯಲ್ಲಿ ಸವಾರಿ ಮಾಡುತ್ತ ಹೋಗುವುದು, ಬೇರೆಯವರ ಮನಸ್ಸಿನಲ್ಲಿರುವುದನ್ನು ನೇರವಾಗಿ ಗ್ರಹಿಸುವುದು, ಕಬ್ಬಿಣವನ್ನು ಬಂಗಾರ ಮಾಡುವುದು, ಸತ್ತವನನ್ನು ಬದುಕಿಸುವುದು ಮೊದಲಾದ ಅಸಾಧಾರಣ ಸಾಮರ್ಥ್ಯಗಳನ್ನು ಪಡೆಯುವುದೆಂದರ್ಥ.) ಅದಕ್ಕೆ ದೀಪಂಕರ, "ಪಂಡಿತರೇ, ಪೂರ್ವಜನ್ಮದ ಪುಣ್ಯದ ಬಲದಿಂದ ನಿಮಗೆ ಮನುಷ್ಯ ಜನ್ಮ ಬಂದಿದೆ, ಒಳ್ಳೆಯ ವಿದ್ಯೆ ಕಲಿತಿದ್ದೀರಿ, ಬಹಳ ಪಾಂಡಿತ್ಯ ಗಳಿಸಿದ್ದೀರಿ. ಪುಣ್ಯದಿಂದ ಬುದ್ಧನ ಧರ್ಮವನ್ನು ಅರಿತುಕೊಳ್ಳುವ ಅವಕಾಶವೂ ಒದಗಿದೆ. ಆ ಧರ್ಮವೇ ಎಲ್ಲ ತೊಂದರೆಗಳನ್ನೂ ನೀಗಿಸುವ ಔಷಧ, ಅಮೃತ. ಅದಕ್ಕಿಂತ ಹೆಚ್ಚಿನ ಸಿದ್ಧಿ ಯಾವುದಿದೆ? ಮಂತ್ರ-ಯಕ್ಷಿಣಿ-ಮಾಯ ಇವುಗಳ ಸಿದ್ಧಿಯನ್ನು ನಂಬಿ ಕೆಡಬೇಡಿ. ನನ್ನ ಮಾತನ್ನು ಕೇಳಿ, ನಿಮ್ಮ ಧರ್ಮ

ಜ್ಞಾನವೇ ಅತ್ಯುತ್ತಮವಾದ ಸಿದ್ಧಿ. ಇರುವ ಬಂಗಾರ ವನ್ನು ಮಾರಿ ಇದ್ದಿಲನ್ನು ಕೊಂಡುಕೊಳ್ಳಲು ಹೋಗ ಬೇಡಿ!" ಎಂದು ಉಪದೇಶಿಸಿದ.

ರತ್ನಭದ್ರ ಸಮ್ಮತಿಸಿ ಗುಹೆಯೊಂದರಲ್ಲಿ ಕುಳಿತು ಧ್ಯಾನ ಮಾಡತೊಡಗಿದ. ಗುಹೆಯ ಹೊರಗಡೆ ಬಾಗಿಲ ಮೇಲೆ, 'ಯಾವುದಾದರೂ ಇಲ್ಲಿನ ಲೋಭ ನನ್ನನ್ನು ಸ್ವಲ್ಪ ವಾದರೂ ಸೆಳೆಯುವುದಾದರೆ ನನ್ನ ತಲೆ ಒಡನೆಯೇ ಕಡಿದುರುಳಲಿ!' ಎಂಬ ಬರಹವನ್ನು ಬರೆದು, ತಾನು ಒಳಗೆ ಹನ್ನೆರಡು ವರ್ಷಗಳ ಕಾಲ ಕುಳಿತು ಧ್ಯಾನಮಾಡಿ 'ಚಕ್ರಸಂವರಮಂಡಲ' ಎಂಬ ಸಿದ್ಧಿಯನ್ನು ಪಡೆದ. ಅನಂತರ ಅವನು ಹೀಗೆ ಹೇಳುತ್ತಿದ್ದ – "ದೀಪಂಕರನನ್ನು ಕಾಣುವ ಮೊದಲು ಅರವತ್ತು ಮಂದಿ ಗುರುಗಳಿಂದ ನಾನು ಉಪದೇಶ ಪಡೆದಿದ್ದೆ. ಆದರೆ ದಿಟವಾದ ಸಿದ್ಧಿಯ ದಾರಿ ಯನ್ನು ತೋರಿಸಿದವನು ದೀಪಂಕರನೊಬ್ಬನೇ!"

ಬೌದ್ಧ ವಿಹಾರಗಳ ಸುಧಾರಣೆ

ಮಂಗ್-ಯುಲ್ ಎಂಬಲ್ಲಿ ದೀಪಂಕರನಿದ್ದಾಗ ಅವನ



'ಇರುವ ಬಂಗಾರವನ್ನು ಮಾರಿ ಇದ್ದಿಲನ್ನು ಕೊಂಡುಕೊಳ್ಳಲು ಹೋಗಬೇಡಿ !'

ಪ್ರವಚನಗಳನ್ನು ಕೇಳಿದವರಲ್ಲಿ ಜಯಾಕರ ಎಂಬ ಟಿಬೆಟಿ ಪಂಡಿತ ಮುಖ್ಯನಾದವನು. ದೀಪಂಕರನಿಗೆ ಪಟ್ಟಶಿಷ್ಯನೂ ಉತ್ತರಾಧಿಕಾರಿಯೂ ಆದ ಇವನು ತುಂಬ ಬುದ್ಧಿಶಾಲಿ, ವಿದ್ಯಾವಂತ, ವಿನಯಶೀಲ. ಅವನ ಆಚಾರ ಕಟ್ಟುನಿಟ್ಟಾದುದು, ಶೀಲ ಬಿಗಿಯಾದುದು, ಯಾವ ಅತಿರೇಕಕ್ಕೂ ಎಡೆಯಿರದಂಥ ಮನೋವೃತ್ತಿ ಅವನದು. ಸೂತ್ರಗಳನ್ನೂ ತಂತ್ರಗಳನ್ನೂ ಓದಿ ಅರಗಿಸಿಕೊಂಡಿದ್ದ ಈತ ತನ್ನ ದೇಶದಲ್ಲಿ ಬೌದ್ಧ ಧರ್ಮದ ಹೆಸರಿನಲ್ಲಿ ಹಲವಾರು ಅನಾಚಾರಗಳು ಬೆಳೆದುಬಂದಿರುವುದನ್ನು ಕಂಡು ಅವನ್ನು ಹೇಗಾದರೂ ತೊಡೆದುಹಾಕಬೇಕೆಂದು ಹವಣಿಸುತ್ತಿದ್ದ.

ದೀಪಂಕರನನ್ನು ಕಂಡು ಈ ವಿಚಾರ ಪ್ರಸ್ತಾಪಿಸಿದ. ಅವರಿಬ್ಬರಿಗೂ ಎಲ್ಲ ವಿವರಗಳಲ್ಲಿಯೂ ಒಮ್ಮತವಿದ್ದಿತು. ಧರ್ಮ ಇರುವುದು ಜನರನ್ನು ಬೆಳಕಿನ ಕಡೆ ಒಯ್ಯಲೆಂದು; ಕತ್ತಲೆಯಲ್ಲಿ ಉಳಿಸಲೆಂದಲ್ಲ. ಧರ್ಮವನ್ನು ಜನರಿಗೆ ಮುಟ್ಟಿಸುವ ಭಿಕ್ಷುಗಳು ಸರಿಯಾಗಿ ನಡೆದುಕೊಳ್ಳದಿದ್ದರೆ ಜನರು ತಪ್ಪುದಾರಿಯನ್ನು ಹಿಡಿಯುವುದು ಸಹಜವೇ ಅಲ್ಲವೆ? ಶೀಲವಿಲ್ಲದ ಭಿಕ್ಷು ಜನರ ಜೀವನದಲ್ಲಿ ಮುಳ್ಳಿ

ದ್ದಂತೆ. ಅಂಥ ಭಿಕ್ಷುಗಳನ್ನು ಮಠಗಳಿಂದ ಓಡಿಸುವುದು ಅಗತ್ಯವೆಂದು ಬ್ರೋಮ್ (ಜಯಾಕರನ ಮತ್ತೊಂದು ಹೆಸರು) ಭಾವಿಸಿದ. ಟಿಬೆಟ್‌ನ ಬೌದ್ಧವಿಹಾರಗಳಲ್ಲಿ ಸುಧಾರಣೆ ತರಬೇಕೆಂದು ಅವನ ಕಾತರವಾಗಿದ್ದಿತು. ಈ ಕೆಲಸದಲ್ಲಿ ಅವನಿಗೆ ದೀಪಂಕರನಂಥ ಹಿರಿಯನ ನೆರವು, ಬೆಂಬಲ ದೊರಕಿತು.

ತಾನು ಟಿಬೆಟ್‌ಗೆ ಬಂದಮೇಲೆ ಮೂರು ವರ್ಷಗಳ ಅನಂತರ ಭಾರತಕ್ಕೆ ಹಿಂದಿರುಗಬೇಕೆಂದು ದೀಪಂಕರ ಬಯಸಿದಾಗ ಬ್ರೋಮ್, "ಮಹಾಸ್ವಾಮಿ, ತಾವು ಈಗ ಟಿಬೆಟ್‌ನಿಂದ ಹೊರಟುಹೋದರೆ ಧರ್ಮದ ಕೆಲಸ ಇಲ್ಲಿಗೇ ನಿಂತಂತೆಯೇ! ತಾವು ಆರಂಭಿಸಿದ ಒಳ್ಳೆಯ ಕೆಲಸ ಒಂದು ರೂಪ ತಾಳುವವರೆಗೆ ದಯಮಾಡಿ ಇಲ್ಲಿಯೇ ಇರಿ. ಟಿಬೆಟ್‌ದೇಶಕ್ಕೆ ತಮ್ಮ ಮಾರ್ಗದರ್ಶನ ಬೇಕೇಬೇಕು" ಎಂದು ಅಂಗಲಾಚಿ ಬೇಡಿಕೊಂಡ. ಜನರ ಒತ್ತಾಯವೂ ಒತ್ತಾಸೆಯೂ ಸೇರಿದವು. ಆಗ ದೀಪಂಕರ ಭಾರತಕ್ಕೆ ಹಿಂದಿರುಗುವ ಯೋಚನೆ ಬಿಟ್ಟು ಟಿಬೆಟ್‌ನಲ್ಲೇ ಇರಲು ಒಪ್ಪಿಕೊಂಡ. ಬ್ರೋಮ್ ದೀಪಂಕರನ ಮೇಲೆ 'ಅತೀಶಮಹಾಪ್ರಭು ಸ್ತೋತ್ರ'

ವೊಂದನ್ನು ಟಿಬೆಟಿ ಭಾಷೆಯಲ್ಲಿ ರಚಿಸಿದ್ದಾನೆ.

ಟಿಬೆಟ್‌ದೇಶದ ದೊಡ್ಡ ಪಂಡಿತರೆಲ್ಲ ದೀಪಂಕರನ ಬಳಿ ಶಿಷ್ಯರಾಗಿ ನಿಂತರು. ಅವನು ಹೋದೆಡೆಯಲ್ಲೆಲ್ಲ ಜನರು ನೆರೆದು ಅವನ ಮಾತನ್ನು ಕೇಳಲು ಕಾತರ ರಾಗಿದ್ದರು. ಅವನು ಟಿಬೆಟ್‌ಗೆ ಕಾಲಿಟ್ಟಾಗಿನಿಂದ ಅವನು ತೀರಿಕೊಳ್ಳುವವರೆಗೂ ದೇಶದಲ್ಲೆಲ್ಲ ತುಂಬ ಸಂಭ್ರಮದ ವಾತಾವರಣ ಮೂಡಿತ್ತು. ಟಿಬೆಟ್‌ನ ಹಲವಾರು ಕಡೆ ದೀಪಂಕರನು ವಿಹಾರಗಳನ್ನೂ ಮಠ ಗಳನ್ನೂ ದೇಗುಲಗಳನ್ನೂ ಕಟ್ಟಿಸಿದ. ಶಿಷ್ಯರನ್ನು ತಯಾರುಮಾಡಿದ; ಜನರಿಗೆ ಧರ್ಮದ ಬಗ್ಗೆ ತಿಳಿಯ ಹೇಳಿದ; ಗ್ರಂಥಗಳನ್ನು ರಚಿಸಿದ. ಜನರಿಗೆಲ್ಲ ದೀಪಂಕರನ ಮೇಲೆ ಪ್ರೀತಿಯೂ ಭಕ್ತಿಯೂ ಬೆಳೆದವು. ಪ್ರಣಿಧಾನಜ್ಞಾನನೆಂಬ ಚಿತ್ರಗಾರನೊಬ್ಬ ದೀಪಂಕರ ನನ್ನು ಕಂಡೊಡನೆ ಅವನ ಸೌಂದರ್ಯ-ಗಾಂಭೀರ್ಯ ಗಳಿಗೆ ಮನಸೋತು ಅವನೊಂದಿಗೇ ಇರುವ ಸಲುವಾಗಿ ಭಿಕ್ಷುವಾಗಿಬಿಟ್ಟ. ಸಂದರ್ಭ ಒದಗಿದಾಗೆಲ್ಲ ದೀಪಂಕರನ ಭಾವಚಿತ್ರವನ್ನು ಬಿಡಿಸುತ್ತಿದ್ದ ಈ ಕಲಾವಿದ. ದೀಪಂಕರನ ಸುಮಾರು ಎಪ್ಪತ್ತು ಚಿತ್ರಗಳು ಈ

ಕಲಾವಿದನ ಕುಂಚದಿಂದ ಮೈದಳೆದು ಟಿಬೆಟ್‌ನಲ್ಲಿ ಬಳಕೆಗೆ ಬಂದವು. ಕೆಲವು ಇಂದಿಗೂ ಉಳಿದಿವೆ.

ಅದ್ಭುತವಾದ ಬದುಕು

ದೀಪಂಕರನು ಟಿಬೆಟ್‌ನಲ್ಲಿ ಜರುಗಿಸಿದ ಸಾಧನೆ ದಿಟವಾಗಿ ಅದ್ಭುತವಾದುದು. ಧರ್ಮಕ್ಕೆ ಒದಗಿದ್ದ ಕೊಳೆಯನ್ನೆಲ್ಲ ತೊಡೆದುಹಾಕಿ, ಅದರ ಜಾಡ್ಯವನ್ನು ನೀಗಿಸಿ, ಹೊಸ ಕಳೆಯನ್ನೂ ಹೊಸ ಚೇತನವನ್ನೂ ಕೊಟ್ಟವನು ಇವನು. ದಿಟವಾದ ಧರ್ಮವೆಂದರೇನೆಂದು ದೀಪಂಕರ ಬಾಯಿಮಾತಿನಿಂದ ಮಾತ್ರವಲ್ಲದೆ ತನ್ನ ಬದುಕಿನಿಂದ ಟಿಬೆಟ್‌ನ ಜನರಿಗೆ ತೋರಿಸಿಕೊಟ್ಟ. 'ನುಡಿದಂತೆ ನಡೆವ, ನಡೆದಂತೆ ನುಡಿವ' ಶೀಲವಂತ ಇವನು ಎಂದು ಟಿಬೆಟ್‌ನ ಜನರು ಹಾಡಿ ಹೊಗಳಿದರು. ಟಿಬೆಟ್‌ನಲ್ಲಿ ಅವನು ನಡೆದ ಎಡೆಯೆಲ್ಲ ಪವಿತ್ರವಾಯಿತು; ಅವನು ತಂಗಿದ ಹಳ್ಳಿಯೆಲ್ಲ ಪ್ರಸಿದ್ಧವಾಯಿತು. ನಮ್ಮ ದೇಶದಲ್ಲಿ 'ಇಲ್ಲಿ ರಾಮನು ಬಾಣದಿಂದ ನೀರು ತೆಗೆದ', 'ಇಲ್ಲಿ ಸೀತೆ ಸ್ನಾನ ಮಾಡಿದಳು', 'ಇಲ್ಲಿ ಪಾಂಡವ ರಿದ್ದರು' ಎಂದು ಮುಂತಾಗಿ ಅಲ್ಲಲ್ಲಿ ಹೇಳುವ ವಾಡಿಕೆ

ಯಿಲ್ಲವೆ? ಹಾಗೆಯೇ ಟಿಬೆಟ್‌ನಲ್ಲಿ 'ಇಲ್ಲಿಗೆ ದೀಪಂಕರ ಬಂದಿದ್ದ', 'ಇಲ್ಲಿ ದೀಪಂಕರ ಪ್ರವಚನ ಮಾಡಿದ' ಎಂದು ಹೇಳುತ್ತ ಹಲವಾರು ಸ್ಥಳಗಳನ್ನು ತೋರಿಸುತ್ತಾರೆ.

ದೀಪಂಕರನ ಬದುಕನ್ನು ನಿರೂಪಿಸುವ ಟಿಬೆಟಿ ಪುಸ್ತಕಗಳು ಹಲವಾರು ಇವೆ. ಅವುಗಳಲ್ಲಿ ದೀಪಂಕರನ ಗುಣಗಳನ್ನು ಅವನ ಕಾಲದಲ್ಲಿಯೇ ಇದ್ದವರು ಬಣ್ಣಿಸಿದ್ದಾರೆ. ಇವುಗಳಿಂದ ಸ್ಪಷ್ಟವಾಗುವ ಚಿತ್ರ ಇದು. ದೀಪಂಕರನ ಸುತ್ತ ಯಾವಾಗಲೂ ಶಿಷ್ಯರು ನೆರೆದಿರುತ್ತಿದ್ದರು. ಅವನ ನಿಲುವು ಧೀರಗಂಭೀರವಾಗಿದ್ದಿತು, ನೋಡಿದೊಡನೆ ಯಾರಾದರೂ ಗೌರವದಿಂದ ನಮಸ್ಕರಿಸುವರು. ಮುಖದಲ್ಲಿ ಸೊಗಸಾದ ಚಹರೆಗಳು; ಕಳೆಕಳೆಯಾದ ಮುಖದಲ್ಲಿ ಹೊಳೆಯುವ ಕಣ್ಣುಗಳು. ಮುದುಕನಾಗಿದ್ದರೂ ಸೌಂದರ್ಯ ಕುಂದಿರಲಿಲ್ಲ. ನಸುನಗು ಅವನ ತುಟಿಗಳ ಮೇಲೆ ಕುಣಿದಾಡುತ್ತಿದ್ದಿತು; ಅವನ ಮಾತು ತುಂಬ ನಯ. ಅವನು ಗಟ್ಟಿಯಾಗಿ ಮಾತನಾಡಿದುದನ್ನಾಗಲೀ ಗದರಿಸಿಕೊಂಡುದನ್ನಾಗಲೀ ಸಿಟ್ಟಿಗೆದ್ದುದನ್ನಾಗಲೀ ಅಪಹಾಸ್ಯ ಮಾಡಿದುದನ್ನಾಗಲೀ ಯಾರೂ ಕಂಡರಿಯರು. ಮಾತುಮಾತಿಗೆ ಸಂಸ್ಕೃತ

ಶ್ಲೋಕಗಳನ್ನು ಉದ್ಧರಿಸುವುದು ಅವನ ವಾಡಿಕೆ. ಅವನ ಧ್ವನಿ ಮಂಜುಳವಾಗಿರುತ್ತಿದ್ದಿತು; ಮಾತು ಎಡೆ ತಡೆಯಿಲ್ಲದೆ ಹೊಳೆಯಂತೆ ಹರಿಯುತ್ತಿದ್ದಿತು. ಪದಗಳ ಉಚ್ಚಾರಣೆ ಸ್ಫುಟವಾಗಿ, ಸ್ಪಷ್ಟವಾಗಿ ಇರುತ್ತಿದ್ದಿತು. ಅವನ ತೌರೂರು ಬಂಗಾಳವಾದುದರಿಂದ ಮಾತಿನ ನಡುವೆ ಬಂಗಾಳಿಯಲ್ಲಿ 'ಅತಿ ಭಾಲ, ಅತಿ ಮಂಗಳ' (ತುಂಬ ಒಳ್ಳೆಯದು, ತುಂಬ ಮಂಗಳ) ಎಂಬ ಬಳಕೆ ನುಸುಳಿ ಬರುತ್ತಿದ್ದಿತು. ಕೂಡುವಾಗ, ನಿಲ್ಲುವಾಗ, ಪದೇ ಪದೇ 'ಆರ್ಯ-ತಾರೆ', 'ಆರ್ಯಅಚಲ', 'ಮಹಾ ಕಾರುಣಿಕ', 'ಶಾಕ್ಯಮುನಿ' ಎಂಬ ಉದ್ಗಾರ ಕೇಳಿಬರುತ್ತಿದ್ದಿತು.

ಅವನಿಗೆ ಟಿಬೆಟ ಜನ ಕುಡಿಯುತ್ತಿದ್ದ ಚಹಾ ಪಾನೀಯ ತುಂಬ ಮೆಚ್ಚುಗೆಯಾಯಿತು. ದೀಪಂಕರ ಟಿಬೆಟ್‌ದೇಶದ ಗಡಿಯನ್ನು ಮುಟ್ಟಿದಾಗ ರಾಜನ ಪರಿವಾರದವರು ದೀಪಂಕರನಿಗೆ ಈ ಪಾನೀಯವನ್ನು ಕೊಟ್ಟು ಸ್ವಾಗತಿಸಿದರು. ಅದನ್ನು ಕುಡಿದನಂತರ ದೀಪಂಕರ ತನ್ನ ಜೊತೆಯಲ್ಲಿದ್ದ ಶಿಷ್ಯ ಜಯಶೀಲನನ್ನು ಕುರಿತು, "ಈ ಪಾನೀಯದ ಹೆಸರೇನು ?" ಎಂದು

ಕೇಳಿದ. ಜಯಶೀಲ, "ಇದನ್ನು ಚಾ ಎನ್ನುತ್ತೇವೆ, ಈ ದೇಶದಲ್ಲಿ ಸಂನ್ಯಾಸಿಗಳೂ ಇದನ್ನು ಕುಡಿಯುತ್ತಾರೆ" ಎಂದು ಹೇಳಿದ. ದೀಪಂಕರ, "ತುಂಬ ಚೆನ್ನಾಗಿದೆ. ಈ ದೇಶದ ಸಂನ್ಯಾಸಿಗಳ ಶೀಲಶುದ್ಧಿಯ ಪುಣ್ಯದಿಂದಲೇ ಈ ಪಾನೀಯ ಮೊದಲಾಗಿರಬೇಕು!" ಎಂದ. ದೀಪಂಕರನ ಈ ಪ್ರಶಂಸೆಯಿಂದ ಚಹಾ ಪಾನೀಯದ ಜನಪ್ರೀತಿ ಇನ್ನೂ ಹೆಚ್ಚಿತು! ಆ ದೇಶದ ಭಿಕ್ಷುಗಳು ದಿನಕ್ಕೆ ಏನಿಲ್ಲವೆಂದರೂ ಐವತ್ತು-ಅರವತ್ತು ಬಟ್ಟಲು ಗಳಷ್ಟು ಚಹಾ ಕುಡಿಯುತ್ತಾರೆ; ಧಾರ್ಮಿಕ ವಿಧಿಗಳ ಸಂದರ್ಭದಲ್ಲಿಯೂ ಚಹಾ ಸೇವನೆ ತಪ್ಪುವುದಿಲ್ಲ.

ಅವನ ಬದುಕಿನಲ್ಲಿ ಅದ್ಭುತ ಪ್ರಸಂಗಗಳು ಹಲವಾರು ಜರುಗಿದವು ಎಂದು ಹೇಳುತ್ತಾರೆ. ದೀಪಂಕರನು ಲ್ಹಾಸಾ ನಗರದ ಪ್ರಸಿದ್ಧ ದೇವಾಲಯಕ್ಕೆ ಬಂದಾಗ ಗರ್ಭಗುಡಿಯೊಳಗಿನಿಂದ ಉದ್ದ ಗಡ್ಡದ ಮುದುಕನೊಬ್ಬ ಹೊರಬಂದು, "ಮಹಾಪಂಡಿತನಿಗೆ ಸುಸ್ವಾಗತ! ವಿಜಯಿಯಾಗುವೆ!" ಎಂದು ಹೇಳಿ ಮತ್ತೆ ಗರ್ಭಗುಡಿಯೊಳಗೆ ಹೋದ. ದೀಪಂಕರನೂ ಅವನನ್ನರಸಿ ಗರ್ಭಗುಡಿಯೊಳಗೆ ಹೋಗಲು ಆ ಮುದುಕ ಎಲ್ಲಿಯೂ ಕಾಣಲಿಲ್ಲ.

ಒಳಗಿನ ಅವಲೋಕಿತೇಶ್ವರ-ಬೋಧಿಸತ್ತ್ವನ ಮೂರ್ತಿ ನಸುನಗುತ್ತಿದ್ದಿತು. ದೀಪಂಕರ, 'ಎಂಥ ದುರ್ದೈವಿ ನಾನು! ಅವಲೋಕಿತೇಶ್ವರನನ್ನು ಸಂಧಿಸಲಾಗಲಿಲ್ಲವಲ್ಲಾ' ಎಂದು ಮರುಗಿದ.

ದೇವಾಲಯದ ಸುತ್ತ ನೋಡುತ್ತಿರುವಾಗ ಅವನ ಮನಸ್ಸಿನಲ್ಲಿ 'ಈ ಜನರು ಈ ಭವ್ಯವಾದ, ಸುಂದರವಾದ ಗುಡಿಯನ್ನು ಹೇಗೆ ಕಟ್ಟಿದರೋ?' ಎನ್ನಿಸಿತು. ಅಷ್ಟು ಹೊತ್ತಿಗೆ ಸರಿಯಾಗಿ ಹುಚ್ಚಿಯಂತೆ ತೋರುತ್ತಿದ್ದ ಮುದುಕಿಯೊಬ್ಬಳು ಇವನ ಬಳಿ ಬಂದು, "ಈ ಗುಡಿಯನ್ನು ಕಟ್ಟಿದ ಬಗೆಯನ್ನು ತಿಳಿಯಬೇಕೆ ನೀನು?" ಎಂದು ಕೇಳಿದಳು. ತನ್ನ ಮನಸ್ಸಿನಲ್ಲಿ ಮೂಡಿದುದನ್ನು ಅರಿತುಕೊಂಡ ಈ ಮುದುಕಿ ದೇವತೆಯೇ ಆಗಿರಬೇಕೆಂದು ದೀಪಂಕರ ನಿಶ್ಚಯಿಸಿ ಮನಸ್ಸಿನಲ್ಲೇ ಆಕೆಗೆ ನಮಸ್ಕಾರ ಮಾಡಿ, "ಹೌದು, ತಿಳಿಯುವ ಕುತೂಹಲವಿದೆ" ಎಂದು ಹೇಳಿದ. ಅದಕ್ಕೆ ಹುಚ್ಚಿ, "ಹಾಗಾದರೆ ನೋಡು, ಗುಡಿಯ ಇತಿಹಾಸವನ್ನು ಗುಡಿಯ ಕಳಶಸ್ತಂಭದಿಂದ ನಾಲ್ಕು ನೂರು ದೂರದಲ್ಲಿ ಭೂಮಿಯೊಳಗೆ ಹುದುಗಿಸಿಟ್ಟಿದ್ದಾರೆ. ಆದರೆ ಈ ವಿಚಾರವನ್ನು ನೀನು ಯಾರಿಗೂ ಹೇಳ

ಬಾರದು" ಎಂದಳು. ಅನಂತರ ದೀಪಂಕರ ಆ ಸ್ಥಳ ವನ್ನು ಅಗೆದು ನೋಡಿದಾಗ ಗುಡಿಯ ಇತಿಹಾಸವನ್ನು ಕುರಿತ ಪುಸ್ತಕವಿದ್ದಿತು. ಆ ಪುಸ್ತಕವನ್ನು ಕೈಗೆತ್ತಿ ಕೊಂಡೊಡನೆ ಭಂಡಾರದೇವತೆ, "ನೀನು ಇದನ್ನು ಓದಬಹುದು, ಬೇಕಿದ್ದರೆ ಬರೆದುಕೊಳ್ಳಲೂಬಹುದು. ಆದರೆ ಒಂದೇ ಹಗಲಲ್ಲಿ ಎಷ್ಟು ಮಾಡಬಹುದೋ ಅಷ್ಟು ಮಾತ್ರ ಮಾಡು!" ಎಂದು ಹೇಳಿದಂತೆ ಕೇಳಿ ಸಿತು. ಒಡನೆಯೇ ದೀಪಂಕರನು ನಾಲ್ವರು ಶಿಷ್ಯ ರೊಂದಿಗೆ ಅದರ ಪ್ರತಿ ಮಾಡಿಕೊಳ್ಳಲು ತೊಡಗಿದ. ಒಂದು ಪ್ರಕರಣವನ್ನು ಬಿಟ್ಟು ಉಳಿದಂತೆ ಇಡೀ ಪುಸ್ತಕವನ್ನು ಪ್ರತಿ ಮಾಡಿಕೊಂಡ. ಈ ಪುಸ್ತಕ ಇಂದಿಗೂ ಟಿಬೆಟ್‌ನಲ್ಲಿ ಮಾನ್ಯವಾಗಿದೆ.

ಹೀಗೆ ಹೋದೆಡೆಯಲ್ಲೆಲ್ಲ ದೇವತೆಗಳು ಅಲ್ಲಲ್ಲಿ ಅಡಗಿದ್ದ ಸಾರಸ್ವತ ಸಂಪತ್ತನ್ನು ದೀಪಂಕರನಿಗೆ ಒದ ಗಿಸಿದರೆಂದೂ ಅವನ್ನೆಲ್ಲ ದೀಪಂಕರನು ಪ್ರತಿ ಮಾಡಿ ಕೊಂಡನೆಂದೂ ಪ್ರತೀತಿಯಿದೆ. ಟಿಬೆಟ್ಟಿನ ಧಾರ್ಮಿಕ ವಾಙ್ಮಯಕ್ಕೆ ದೀಪಂಕರನ ಕೊಡುಗೆ ಹೀಗೆ ಅಪಾರ ವಾದುದು, ಅಮೂಲ್ಯವಾದುದು.

ನಿರ್ಯಾಣ

ದೀಪಂಕರನು ತನ್ನ ಪ್ರವಾಸ ಕಾಲದಲ್ಲಿ ಭಾರತ, ನೇಪಾಳ, ಟಿಬೆಟ್‌ಗಳಲ್ಲಿ ಹಲವಾರು ವಿಹಾರಗಳಿಗೆ ಕಾರಣನಾದನು. ಅವನು ಒಂದು ಹಳ್ಳಿಯಲ್ಲಿ ಒಂದು ರಾತ್ರಿ ತಂಗಿದ್ದನೆಂದರೆ ಆ ಹಳ್ಳಿ ಅದೇ ಕಾರಣದಿಂದಾಗಿ ಪವಿತ್ರ ಕ್ಷೇತ್ರವೆನಿಸುತ್ತಿದ್ದಿತು; ಮುಂದೆ ಅವನ ಶಿಷ್ಯರು ಅಲ್ಲೊಂದು ವಿಹಾರವನ್ನು ಕಟ್ಟುವರು. ಎಲ್ಲಿಯಾದರೂ ಮೂರು-ನಾಲ್ಕು ತಿಂಗಳುಗಳ ಕಾಲ ಬೀಡುಬಿಟ್ಟಿದ್ದನೆಂದರೆ ಅದು ಪ್ರಸಿದ್ಧ ವಿಹಾರವೇ ಆಗುವುದು.

ದೀಪಂಕರನಿಗೆ ವಿರೋಧಿಗಳಿರಲಿಲ್ಲವೆಂದಲ್ಲ. ಯಾರು ಏನು ಒಳ್ಳೆಯ ಕೆಲಸ ಮಾಡಿದರೂ ಅದನ್ನು ಸಹಿಸದವರು ಇದ್ದೇ ಇರುವರು; ಎಲ್ಲ ಸಜ್ಜನರಿಗೂ ಸಾಹಸಿಗಳಿಗೂ ಸುಧಾರಕರಿಗೂ ಆಗದವರು ಕೆಲವರು ತೊಂದರೆ ಕೊಡುವುದು ಸಹಜವೇ. ದೀಪಂಕರನಿಗೆ ರಾಜನೂ ಜನರೂ ಸಲ್ಲಿಸುತ್ತಿದ್ದ ಅಪಾರ ಗೌರವವನ್ನು ಕಂಡು ಹಲವರು ಕರುಬಿ ಅವನಿಗೆ ಅಪಮಾನ ಮಾಡಲು ಯತ್ನಿಸುತ್ತಿದ್ದರು; ಹೇಗಾದರೂ ಮಾಡಿ ಟಿಬೆಟ್‌ನಿಂದ ಅವನನ್ನು ಓಡಿಸಿಬಿಡಲು ಹವಣಿಸುತ್ತಿದ್ದರು. 'ದೀಪಂಕರ

ಇಲ್ಲಿಗೆ ಬಂದಾಗಿನಿಂದ ಹೆಚ್ಚುತ್ತಿರುವುದು ಧರ್ಮವಲ್ಲ, ರೋಗಗಳು. ಅವನ ಬೋಧೆಯಲ್ಲಿ ಏನೇನೂ ಇಲ್ಲ; ಅವನಾಗಲೀ ಅವನ ಶಿಷ್ಯರಾಗಲೀ ಧ್ಯಾನದ ನೆವದಲ್ಲಿ ಸುಮ್ಮನೆ ಕಾಲ ಕಳೆಯುತ್ತಾರೆ ಅಷ್ಟೆ, ಸಾರ್ಥಕವಾದ ಏನನ್ನೂ ಮಾಡುತ್ತಿಲ್ಲ' ಎಂದು ಮುಂತಾಗಿ ಇವರು ಅಪಪ್ರಚಾರ ಮಾಡತೊಡಗಿದರು. ಈ ಮಾತೆಲ್ಲ ದೀಪಂಕರನ ಕಿವಿಗೆ ಬೀಳದೆ ಇರುತ್ತಿರಲಿಲ್ಲ; ಆದರೆ ಅವನು, "ಇಂಥವರಿಂದ ಒಂದು ನೂರು ಯೋಜನ ದೂರವಿರಬೇಕು ಅಷ್ಟೇ; ಮತ್ತೇನೂ ಮಾಡಲು ಬಾರದು!" ಎಂದು ಹೇಳಿಬಿಡುತ್ತಿದ್ದ. ಇವನನ್ನು ಕೊಲ್ಲಬೇಕೆಂದೂ ಕೆಲವು ಪ್ರಯತ್ನಗಳು ನಡೆದವು. ಒಂದೊಂದು ಬಾರಿ ಇವುಗಳಿಂದ ದೀಪಂಕರನಿಗೆ ಬೇಸರವೂ ಆಗುತ್ತಿದ್ದಿತು. ಒಮ್ಮೆ ಒಂದು ಸಭೆಯಲ್ಲಿ ಯಾರೋ ಅವನನ್ನು ಕೇಳಿದರು, "ಸ್ವಾಮಿ, ತಮ್ಮ ಮುಂದಿನ ಜನ್ಮದ ವಿಚಾರ ಏನು?" ಎಂದು. ಅದಕ್ಕೆ ದೀಪಂಕರ, "ಈ ವಿಚಾರವಾಗಿ ನಾನು ಹೇಳುವುದೇನಿದೆ? ಆದರೆ ಇಷ್ಟಂತೂ ಖಂಡಿತ, ನನ್ನ ಮುಂದಿನ ಜನ್ಮ ಟಿಬೆಟ್‌ದೇಶದಲ್ಲಂತೂ ಆಗುವುದಿಲ್ಲ!" ಎಂದು

ನಗುತ್ತ ಹೇಳಿದ. ಅದೇಕೆಂದು ಕೇಳಿದುದಕ್ಕೆ, "ಟಿಬೆಟ್‌ನ ಜನರಾದ ನಿಮಗೆ ಗುರುಗಳನ್ನು ಕಂಡುಕೊಳ್ಳುವ ಬಗೆ ತಿಳಿಯದು. ಇತರ ಮನುಷ್ಯರಂತೆಯೇ ಅವನೂ ಒಬ್ಬ ಎಂದು ತಾತ್ಸಾರ ಭಾವನೆಯಿಂದ ಕಾಣುತ್ತೀರಿ. ಅವನ ಉಪದೇಶವನ್ನು ಕೇಳುತ್ತೀರಿ ಅಷ್ಟೆ. ಅದರಂತೆ ನಡೆಯು ವುದಿಲ್ಲ!" ಎಂದು ವಿವರಿಸಿದ.

ಆದರೆ ವಿರೋಧಕ್ಕಿಂತ ಪ್ರೀತಿಯೇ ಹೆಚ್ಚಾಗಿ ಆ ದೇಶದಲ್ಲಿ ಅವನ ಪಾಲಿಗೆ ಬಂದುದರಿಂದ ವಿರೋಧಿ ಗಳ ಪ್ರಯತ್ನವೇನೂ ಫಲಿಸಲಿಲ್ಲ. ವಿರೋಧಿಗಳನ್ನು ರಾಜ ಶಿಕ್ಷಿಸುವೆನೆಂದಾಗ ದೀಪಂಕರ ಬೇಡವೆಂದು ತಡೆದ. ಅವನ ಕರುಣೆ ಅಪಾರವಾಗಿದ್ದಿತು. ಕಾಲ ಕ್ರಮದಲ್ಲಿ ಇವರೆಲ್ಲ ಅವನ ಅನುಯಾಯಿಗಳಾಗಿ ನಿಲ್ಲುವಂತಾಯಿತು.

ದೀಪಂಕರನಿಗೆ ಎಪ್ಪತ್ತೆರಡು ವರ್ಷಗಳಾಗಲು ಅವನ ಮೈಯಲ್ಲಿ ಬಲ ಉಡುಗತೊಡಗಿತು. ತನ್ನ ಬದುಕಿನ ಅವಧಿ ಬಹಳ ಉಳಿದಿಲ್ಲವೆಂದುಕೊಂಡು ತಾನು ಆರಂಭಿ ಸಿದ್ದ ಕೆಲಸಗಳನ್ನೆಲ್ಲ ಪೂರ್ಣಗೊಳಿಸುವುದರಲ್ಲಿ ತೊಡ

ಗಿದ. ತನ್ನ ಎಪ್ಪತ್ತಮೂರನೆಯ ವಯಸ್ಸಿನಲ್ಲಿ (ಎಂದರೆ ೧೦೫೪ ರಲ್ಲಿ) ಕಾಯಿಲೆ ಮಲಗಿದ. ತನ್ನ ಶಿಷ್ಯ ಬ್ರೋಂ‌ಸ್ಟನ್‌ನನ್ನು ಕರೆದು, "ನನ್ನ ಗುರುಗಳೆಲ್ಲ ತುಷಿತ ಸ್ವರ್ಗದಲ್ಲಿದ್ದಾರೆ. ಅವರು ಕಾಣಲು ನಾನೂ ಅಲ್ಲಿಗೆ ಹೋಗಬೇಕು" ಎಂದು ಹೇಳಿದ. ಇದರ ಅರ್ಥ ವನ್ನು ಅರಿತು ಬ್ರೋಂ ಅಳಲು ಮೊದಲುಮಾಡಿದ. ಅವನನ್ನು ಸಂತೈಸುತ್ತ ದೀಪಂಕರ, "ದುಃಖ ಪಡಬೇಡ, ಸಾವು ಯಾರಿಗೂ ತಪ್ಪಿದ್ದಲ್ಲ; ಮತ್ತೆ ನಾವು ಸ್ವರ್ಗದಲ್ಲಿ ಸಂಧಿಸುತ್ತೇವೆ. ನಾನು ತೀರಿಕೊಂಡಮೇಲೆ ನನ್ನ ಪ್ರತಿಮೆಯೊಂದನ್ನು ಮಾಡಿಸಿ ಭಾರತದೇಶಕ್ಕೆ ಕಳುಹಿಸು. ಇಲ್ಲಿ ನನ್ನ ಕೆಲಸವನ್ನು ನೀನು ಮುಂದುವರಿಸು; ಅದ ಕ್ಕಾಗಿ ವಿಹಾರವೊಂದನ್ನು ಏರ್ಪಡಿಸಿಕೋ. ಲೌಕಿಕ ವ್ಯವಹಾರದಲ್ಲಿ ಮಾತ್ರ ಮುಳುಗಿಬಿಡಬೇಡ! ಅದರ ಆಕರ್ಷಣೆಯಿಂದ ದೂರ ಇರು" ಎಂದು ಹೇಳಿ ಸಮಾಧಾನ ದಿಂದ ಪ್ರಾಣಬಿಟ್ಟ.

ಬ್ರೋಂ ಮೊದಲಾಗಿ ಶಿಷ್ಯರು ಅವನ ಕಳೇಬರ ವನ್ನು ವಿಧಿಯಿಂದ ಗೌರವಿಸಿ, ಪೂಜಿಸಿ, ಬೆಂಕಿಗೆ ಒಪ್ಪಿ ಸಿದರು; ಅವನ ಚಿತೆಯ ಬೂದಿಯನ್ನು ಮೂಲಿಕೆಗಳೊಂ

ದಿಗೆ ಗಂಧದ ಮರದೊಂದಿಗೆ ಬೆರೆಸಿ ಅದರ ಬಹುಭಾಗ ವನ್ನು ರ್‍ವ-ಸ್ಸ್ರಿಂಗ್ ಎಂಬ ವಿಹಾರಕ್ಕೆ ಕೊಟ್ಟರು; ಅಲ್ಲಿ ಈ ಅವಶೇಷವನ್ನು ಬೆಳ್ಳಿಯ ಕರಂಡದಲ್ಲಿಟ್ಟು ಅದರ ಮೇಲೊಂದು ಸ್ತೂಪವನ್ನು ಕಟ್ಟಿದರು. ಚಿತೆಯ ಬೂದಿಯನ್ನು ಕರಂಡಗಳಲ್ಲಿಟ್ಟು, ಅದರ ಸಮಾಧಿ ಮೇಲೆ ಮಂದಿರಗಳನ್ನು ಕಟ್ಟಿಸಿದರು. ಇವಕ್ಕೆ ಚೈತ್ಯಗಳೆಂದು ಹೆಸರು. ಇದನ್ನು ಜನರು ಪೂಜಿಸಿ ದೀಪಂಕರನನ್ನು ನೆನೆಸಿಕೊಳ್ಳ ತೊಡಗಿದರು.

ಬ್ರೋಮ್ ಚರಮಗೀತೆಯೊಂದನ್ನು ರಚಿಸಿ, 'ಸ್ವಾಮಿ, ಈ ಹಿಮಾಲಯ ರಾಜ್ಯದಲ್ಲಿ ತಮ್ಮನ್ನು ನನಗಿಂತ ಹೆಚ್ಚಿನ ಶ್ರದ್ಧೆಯಿಂದ ಗೌರವಿಸುವವರಿದ್ದಾರೆ. ಆದರೂ ತಾಯಿ ತನ್ನ ಮಗುವಿನ ಮೇಲೆ ತೋರಿಸುವ ಮಮತೆಯಿಂದ ತಾವು ನನ್ನ ಎಲ್ಲ ಜನ್ಮಗಳಲ್ಲಿಯೂ ನನ್ನ ಗುರುಗಳಾಗಿದ್ದುಕೊಂಡು ದಾರಿ ತೋರಿಸಿ. ಮಹಾತ್ಮರೇ, ಎಲ್ಲ ಕಾಲಗಳಲ್ಲಿಯೂ ಎಲ್ಲೆಡೆಗಳಲ್ಲಿಯೂ ನನ್ನ ಒಡೆಯರಾಗಿರಿ. ಸಂಪೂರ್ಣ ಸಂಬೋಧಿಯನ್ನು ನಾನು ಪಡೆಯುವಂತೆ ಉಪದೇಶ ಮಾಡಿ ಅನುಗ್ರಹಿಸಿ!' ಎಂದು ಬೇಡಿಕೊಂಡಿದ್ದಾನೆ.


ಭಾರತ-
ಭಾರತಿ
ಪುಸ್ತಕ ಸಂಪದ
೨೬೨
ರಾಷ್ಟ್ರೋತ್ಥಾನ
ಸಾಹಿತ್ಯ
ಬೆಂಗಳೂರು ೧೯